# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಡಿಸೆಂಬರ್ 17, 2021

ಸಂಪುಟ : 48 ಸಂಚಿಕೆ : 216 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಎಕ್ಸ್‌ರೇ, ಸಿಟಿ ಸ್ಕ್ಯಾನ್‌ಗೆ ಹೆಚ್ಚಿನ ದರ ವಸೂಲಿ ಮಾಡಿದರೆ ಕ್ರಮ



"ನಗರದ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ದಂಡ ವಿಧಿಸಲಾಗಿದೆ. ದಂಡದ ಮೊತ್ತವನ್ನು 10 ದಿನಗಳೊಳಗಾಗಿ ಪಾವತಿ ಮಾಡಿ, ಸರ್ಕಾರದ ಖಾತೆಗೆ ಜಮಾ ಮಾಡಬೇಕು.

- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ

ದಾವಣಗೆರೆ, ಡಿ. 16- ಕೋವಿಡ್ -19 ಸೋಂಕು ತಪಾಸಣೆ ಕುರಿತಂತೆ ಎಕ್ಸ್‌ರೇ, ಸಿಟಿ ಸ್ಕ್ಯಾನ್ ಎಂಆರ್‌ಐ ಸ್ಕ್ಯಾನ್ ಮುಂತಾದ ಆರೋಗ್ಯ ಸೇವೆಗಳನ್ನು ನೀಡಲು ಸರ್ಕಾರ ನಿಗದಿಪಡಿಸಿದ ದರಕ್ಕಿಂತಲೂ ಹೆಚ್ಚಿನ ದರವನ್ನು ಸಾರ್ವಜನಿಕರಿಂದ ವಸೂಲಿ ಮಾಡಿದ ದಾವಣಗೆರೆಯ ವಿವಿಧ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ತಲಾ 10 ರಿಂದ 50 ಸಾವಿರ ರೂ. ವರೆಗೆ ದಂಡ ವಿಧಿಸಿ, ದಂಡದ ಮೊತ್ತವನ್ನು 10 ದಿನಗಳೊಳಗಾಗಿ ಸಂಗ್ರಹಿಸಿ ಸರ್ಕಾರಕ್ಕೆ ಜಮಾ ಮಾಡುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ (ಕೆಪಿಎಂಇ) ಕಾಯ್ದೆ ಅನುಷ್ಠಾನ ಕುರಿತಂತೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋವಿಡ್ ಸೋಂಕು ವ್ಯಾಪಕವಾಗಿ ಹರಡುತ್ತಿದ್ದ ಸಂದರ್ಭದಲ್ಲಿ ಸಾರ್ವಜನಿಕರಿಗೆ ಆರ್ಥಿಕವಾಗಿ ಹೊರೆಯಾಗಬಾರದು ಹಾಗೂ ಖಾಸಗಿ ವೈದ್ಯಕೀಯ ಸಂಸ್ಥೆಗಳು ಸಂದರ್ಭವನ್ನು ದುರ್ಬಳಕೆ ಮಾಡಿಕೊಂಡು, ಸಾರ್ವಜನಿಕರಿಂದ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡಬಾರದೆಂಬ ಉದ್ದೇಶದಿಂದ ಎಕ್ಸ್‌ರೇ, ಸಿಟಿ ಸ್ಕ್ಯಾನ್ ಸೇರಿದಂತೆ ವಿವಿಧ ವೈದ್ಯಕೀಯ ಸೇವೆಗಳಿಗೆ ದರವನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿತ್ತು. ಆದರೆ ಸರ್ಕಾರದ ಆದೇಶ ಉಲ್ಲಂಘಿಸಿ ವಿವಿಧ ಖಾಸಗಿ ಆರೋಗ್ಯ ಸಂಸ್ಥೆಗಳು ಹೆಚ್ಚಿನ ದರ ವಿಧಿಸುತ್ತಿರುವುದು ಕಂಡುಬಂದಿದ್ದು, ಸಾರ್ವಜನಿಕರಿಂದ ನಿಯಮ ಬಾಹಿರವಾಗಿ ಹಣ ಲೂಟಿ ಮಾಡುವುದನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಕಾನೂನು ಉಲ್ಲಂಘಿಸುವವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದಾಗಿ ಹೇಳಿದ ಜಿಲ್ಲಾಧಿಕಾರಿಗಳು ದಂಡ ಪಾವತಿಯಾಗುವವರೆಗೂ ಕೆಪಿಎಂಇ ಅಥವಾ ಪಿಸಿ ಅಂಡ್ ಪಿಎನ್‌ಡಿಟಿ ಅಡಿ ಸಲ್ಲಿಸಿರುವ ಯಾವುದೇ ಮನವಿಯನ್ನು ತಿರಸ್ಕರಿಸಬಾರದು ಎಂದು ಸೂಚನೆ ನೀಡಿದರು.

ಖಾಸಗಿ ಆಸ್ಪತ್ರೆಗಳು ನಿಗದಿತ ಮಾರ್ಗ ಸೂಚಿಯಂತೆ ವೈದ್ಯಕೀಯ ತ್ಯಾಜ್ಯದ (2ನೇ ಪುಟಕ್ಕೆ)

## ಪಂಚಮಸಾಲಿ ಮೀಸಲಾತಿಗೆ ಗಡುವು ಕೊಟ್ಟಿಲ್ಲ


**ಮುಖ್ಯಮಂತ್ರಿ ಬೊಮ್ಮಾಯಿ**

ಬೆಳಗಾವಿ, ಡಿ. 16 – ಪಂಚಮಸಾಲಿ ಸಮಾಜಕ್ಕೆ ಹಿಂದುಳಿದ ವರ್ಗ 2ಎ ಮೀಸಲಾತಿ ನೀಡುವ ಸಂಬಂಧ ಪಂಚಮಸಾಲಿ ಮುಖಂಡರು ಗಡುವು ಕೊಟ್ಟಿಲ್ಲ. ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಬಂದ ನಂತರ ತೀರ್ಮಾನ ಮಾಡಲಾಗುವುದು ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಪಂಚಮಸಾಲಿ ಸಮಾಜದ ಮುಖಂಡರ ಜೊತೆ ಸಭೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಮೀಸಲಾತಿ ಕುರಿತು ಅವರ ಮನಸ್ಸಿನಲ್ಲಿದ್ದ ಹಲವಾರು ವಿಚಾರಗಳ ಬಗ್ಗೆ ಹೇಳಿದ್ದಾರೆ. ನಾನು ಸುಪ್ರೀಂ ಕೋರ್ಟ್ ತೀರ್ಪು ಸೇರಿದಂತೆ ಕಾನೂನಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಹೇಳಿದ್ದೇನೆ ಎಂದು ತಿಳಿಸಿದ್ದಾರೆ.

ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ನಾವು ಶಿಫಾರಸ್ಸು ಮಾಡಿದ್ದೇವೆ. ಎರಡು - ಮೂರು ತಿಂಗಳು ಚುನಾವಣಾ ನೀತಿ ಸಂಹಿತೆ ಬಂದ ಕಾರಣ ಸಮಿತಿ ವರದಿ ನೀಡುವುದು ತಡವಾಗಿದೆ. ವರದಿ ಬಂದ ಕೂಡಲೇ ಸಚಿವ ಸಂಪುಟ ಸಭೆಯಲ್ಲಿಟ್ಟು ಚರ್ಚಿಸಿ ತೀರ್ಮಾನ (2ನೇ ಪುಟಕ್ಕೆ)

## ನೇಕಾರಿಕೆ ಉತ್ಪನ್ನಗಳಿಗೆ ಸುಸ್ಥಿರ ಮಾರುಕಟ್ಟೆ, ದರ



ನೇಕಾರರಿಗೆ ಸಂಬಂಧಿಸಿದ ಮೂರು ನಿಗಮಗಳನ್ನು ಒಗ್ಗೂಡಿಸಿ ಬಲಪಡಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಲಾಗುತ್ತಿದೆ."

ಬೆಳಗಾವಿ, ಡಿ. 16 - ನೇಕಾರರ ಉತ್ಪನ್ನಗಳಿಗೆ ಸುಸ್ಥಿರ ಮಾರುಕಟ್ಟೆ ಹಾಗೂ ದರ ಒದಗಿಸಲು ಪೂರಕ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅವರು ಇಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನೇಕಾರರ ಸಮಸ್ಯೆಗಳ ಕುರಿತು ಕರೆದ ಸಭೆಯಲ್ಲಿ ಮಾತನಾಡಿದರು.

ನೇಕಾರರ ಬೇಡಿಕೆಗಳನ್ನು ಪರಿಶೀಲಿಸಿದ ಮುಖ್ಯಮಂತ್ರಿಯವರು, ಸರ್ಕಾರದ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಬಟ್ಟೆ/ಸೀರೆಗಳನ್ನು ನೇಕಾರರ ಸಾಮರ್ಥ್ಯಕ್ಕೆ ಅನುಗುಣವಾಗಿ ಖರೀದಿಸಲು ಪ್ರಮಾಣವನ್ನು ನಿಗದಿ ಪಡಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಇದರೊಂದಿಗೆ ಕೈಮಗ್ಗ ಅಭಿವೃದ್ಧಿ ನಿಗಮದ ಮೂಲಕ ಕೈಮಗ್ಗದ ಉತ್ಪನ್ನಗಳಿಗೆ ಡಿಜಿಟಲ್ ವೇದಿಕೆಯಲ್ಲೂ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದವರು ತಿಳಿಸಿದರು.

ಗಿರಿಜನ ಉಪ ಯೋಜನೆಯ ಮಾದರಿಯಲ್ಲಿ ವೃತ್ತಿಪರ ನೇಕಾರರಿಗೆ ಸಹಾಯಧನ ನೀಡುವ ಬೇಡಿಕೆಯ ಕುರಿತು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ, ಸಕಾರಾತ್ಮಕವಾಗಿ ಸೂಕ್ತ ಆದೇಶ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಮಾದರಿಯಲ್ಲಿ ವೃತ್ತಿಪರ ಕೂಲಿ ನೇಕಾರರಿಗೂ ವಿವಿಧ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಉದ್ಯಮಗಳಿಗೆ ಅಲ್ಪಪ್ರಮಾಣದ ಸೆಸ್ ವಿಧಿಸುವ ಮೂಲಕ ನೆರವು ನೀಡಲು ಚಿಂತನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ನೇಕಾರರು ವಾಸಿಸುವ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮ, ಕಾಲೋನಿಗಳನ್ನಾಗಿ ಪರಿವರ್ತಿಸುವ ಕುರಿತು ಕ್ರಮ ಕೈಗೊಳ್ಳುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಮನೆಯಲ್ಲಿಯೇ ಉದ್ಯೋಗ ನಡೆಸುತ್ತಿರುವ ನೇಕಾರರಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯ (3ನೇ ಪುಟಕ್ಕೆ)

## ಮಹಿಳೆಯರ ಮದುವೆ ವಯಸ್ಸು ಹೆಚ್ಚಳಕ್ಕೆ ಕೇಂದ್ರದ ನಿರ್ಧಾರ

ನವದೆಹಲಿ, ಡಿ. 16- ಮಹಿಳೆಯರು ಮದುವೆಯಾಗುವ ಕಾನೂನಿನ ವಯೋಮಿತಿಯನ್ನು 18ರಿಂದ 21 ವರ್ಷಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸಕ್ತ ಪುರುಷರು ಮದುವೆಯಾಗಲು ಕಾನೂನಿನ ವಯೋಮಿತಿ 21 ವರ್ಷವಾಗಿದ್ದರೆ, ಮಹಿಳೆಯರ ವಯೋಮಿತಿ 18 ವರ್ಷವಾಗಿದೆ. ಪುರುಷ ಹಾಗೂ ಮಹಿಳೆಯರ ವಯೋಮಿತಿಯನ್ನು ಒಂದೇ ಹಂತಕ್ಕೆ ತರಲು ಕೇಂದ್ರ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರ ಈ ಕುರಿತ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಸಾಧ್ಯತೆ ಇದೆ. ಬಾಲ್ಯ ವಿವಾಹ ನಿಷೇಧ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಈ ಬದಲಾವಣೆ ತರಲಾಗುವುದು.

ಮದುವೆ ವಯಸ್ಸಿನಲ್ಲಿ ಏಕರೂಪತೆ ತರಲು ಇನ್ನೂ ಹಲವಾರು ವೈಯಕ್ತಿಕ ಕಾಯ್ದೆಗಳಿಗೆ ತಿದ್ದುಪಡಿ ತರಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. (2ನೇ ಪುಟಕ್ಕೆ)

## ಮುಂದಿನ ವರ್ಷದಿಂದ ಆಯ್ದ ಶಾಲೆಗಳಲ್ಲಿ ನೂತನ ಶಿಕ್ಷಣ ನೀತಿ : ನಾಗೇಶ್

ಬೆಳಗಾವಿ, ಡಿ. 16 - ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದ ಕೆಲವು ಪ್ರದೇಶಗಳಲ್ಲಿ ಸೀಮಿತ ಸಂಖ್ಯೆಯ ಆಯ್ದ ಶಾಲೆಗಳಲ್ಲಿ ಮಾತ್ರ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಕೌಜಲಗಿ ಮಹಾಂತೇಶ್ ಶಿವಾನಂದ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ಸಂಬಂಧ ಈಗಾಗಲೇ ಶಿಕ್ಷಕರಿಗೆ ಅಗತ್ಯವಾದ ತರಬೇತಿ ನೀಡಲಾಗುತ್ತಿದೆ. ಹೊಸ ಪಠ್ಯಗಳನ್ನು ಅಳವಡಿಸುವುದಕ್ಕೆ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ತರಬೇತಿ ಕೊಡತ್ತಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಿಂದ ಇದನ್ನು ಆಯ್ದ ಪ್ರದೇಶಗಳ ಕೆಲವೇ ಶಾಲೆಗಳಲ್ಲಿ ಅನುಷ್ಠಾನ ಮಾಡುತ್ತಿದ್ದೇವೆ ಎಂದರು.

## ಕನ್ನಡ ಧ್ವಜ ಸುಟ್ಟಿರುವುದರ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ

ಬೆಳಗಾವಿ, ಡಿ. 16 – ಕೊಲ್ಲಾಪುರದಲ್ಲಿ ದುಷ್ಕರ್ಮಿಗಳು ಕನ್ನಡ ಧ್ವಜ ಸುಟ್ಟು ಹಾಕಿರುವುದನ್ನು ಖಂಡಿಸಿ ನಿರ್ಣಯ ತೆಗೆದುಕೊಳ್ಳಲು ರಾಜ್ಯ ವಿಧಾನಸಭೆ ನಿರ್ಧರಿಸಿದೆ. ಅಲ್ಲದೇ ದುಷ್ಕರ್ಮಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ನಿರ್ಣಯವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕಳಿಸಲಾಗುವುದು.

ಮಹಾರಾಷ್ಟ್ರದಲ್ಲಿ ಮಂಗಳವಾರ ನಡೆದ ಘಟನೆಯನ್ನು ರಾಜ್ಯ ವಿಧಾನಸಭೆಯಲ್ಲಿ ಪ್ರಸ್ತಾಪಿಸಿದಾಗ, ಶಾಸಕರು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಘಟನೆಗಳು ಪದೇ ಪದೇ ನಡೆಯುತ್ತಿವೆ ಎಂದು ಹೇಳಿದ ಕಂದಾಯ ಸಚಿವ ಆರ್. ಅಶೋಕ್, ಸಂಬಂಧಿಸಿದ ಸಚಿವರ ಜೊತೆ ನಾವು ಮಾತನಾಡುತ್ತೇವೆ. ಘಟನೆಯನ್ನು ಖಂಡಿಸುವ ನಿರ್ಣಯ ಜಾರಿಗೊಳಿಸಿ ಅದನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕಳಿಸಿ ಕ್ರಮ ತೆಗೆದುಕೊಳ್ಳಲು ಕೇಳಲಾಗುವುದು ಎಂದು ಹೇಳಿದ್ದಾರೆ.

## ಮತಾಂತರ ನಿಷೇಧ ಕಾಯ್ದೆ ಜಾರಿಯಾಗದಿದ್ದಲ್ಲಿ ಜನಾಂಗೀಯ ಸಂಘರ್ಷಕ್ಕೆ ದಾರಿ: ರಂಭಾಪುರಿ ಶ್ರೀ



**ಪ್ರಶಸ್ತಿ ಪ್ರದಾನ**

ಮರಿಯಮ್ಮನಹಳ್ಳಿ ಬಿ.ಮಂಜಮ್ಮ ಜೋಗತಿ ಅವರಿಗೆ ಜಾನಪದ ಕಲಾಸಿರಿ, ಹೊಸಪೇಟೆಯ ಹೆಚ್.ವಿ.ಶರಣಸ್ವಾಮಿ ಅವರಿಗೆ ವೀರಶೈವ ಸೇವಾ ಸಿರಿ, ಬೆಂಗಳೂರಿನ ಡಬ್ಲ್ಯು.ಎಂ. ಶಿವಕುಮಾರ್ ಅವರಿಗೆ ಶಕ್ತಿ ಸೇವಾ ಸಿರಿ, ತಿರುಪತಿ ಡಾ. ಟಿ.ಎಂ.ನಾಗೇಶ್ ಅವರಿಗೆ ಉದಯೋನ್ಮುಖ ವೈದ್ಯ ಸಿರಿ, ಸಿಂಗಟಾಲೂರಿನ ಕೆ.ವಿ. ಹಂಚಿನಾಳ ಅವರಿಗೆ ಸಮಾಜ ಸೇವಾ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ನಿವೃತ್ತ ನೌಕರರು ಹಾಗು ವಿವಿಧ ಗಣ್ಯರನ್ನು ಕೂಡ ಸನ್ಮಾನಿಸಲಾಯಿತು.

ಹರಪನಹಳ್ಳಿ, ಡಿ.16- ಮತಾಂತರ ನಿಷೇಧ ಕಾಯ್ದೆ ಜಾರಿಯಾಗದಿದ್ದಲ್ಲಿ ಜನಾಂಗೀಯ ಸಂಘರ್ಷಕ್ಕೆ ದಾರಿಯಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ಪಟ್ಟಣದ ಶ್ರೀ ತೆಗ್ಗಿನಮಠ ಸಂಸ್ಥಾನದ ಆವರಣದಲ್ಲಿ ಲಿಂ.ಚಂದ್ರಮೌಳೀಶ್ವರ ಶ್ರೀಗಳವರ 7ನೇ ವರ್ಷದ ಪುಣ್ಯ ಸ್ಮರಣೋತ್ಸವ, ವರಸದ್ಯೋಜಾತ ಶ್ರೀಗಳವರ ಪಟ್ಟಾಧಿಕಾರದ 6ನೇ ವಾರ್ಷಿಕೋತ್ಸವ. ವೀರ ಮಹೇಶ್ವರರಿಗೆ ಶಿವದೀಕ್ಷೆ, ತೆಗ್ಗಿನಮಠದ ಬಂಧನ ವೆಬ್ ಸೈಟ್ ಅನಾವರಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ತುಳಿದು ಬದುಕುವುದಕ್ಕಿಂತ, ತಿಳಿದು ಬದುಕುವುದು ಶ್ರೇಷ್ಠ. ಸಂಸ್ಕಾರವಂತರಾಗಿ ಬದುಕಿ, ಬಾಳಲು ಗುರು ಮಾರ್ಗದರ್ಶನ ಅವಶ್ಯ ಎಂದರು.

ವೀರಶೈವ ಧರ್ಮದಲ್ಲಿ ಅಷ್ಟೇ ಅಲ್ಲ, ಎಲ್ಲ ಧರ್ಮಗಳಲ್ಲೂ ಸಹ ಗುರುವಿಗೆ ಪ್ರಥಮ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಲಿಂ. ಚಂದ್ರಮೌಳೀಶ್ವರ ಶ್ರೀಗಳು ಧರ್ಮ ಮುಖಿ ಮತ್ತು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿದ್ದನ್ನು ಮರೆಯಲಾಗದು ಎಂದರು.

ಶೈಕ್ಷಣಿಕ ರಂಗದಲ್ಲಿ ಅದ್ಭುತ ಸತ್ಕ್ರಾಂತಿಗೈದ ಶಿವಾಚಾರ್ಯ ರತ್ನ ಅವರಾಗಿದ್ದರು. ಅವರ ಪುಣ್ಯ ಸ್ಮರಣೆ ಬದುಕಿ ಬಾಳುವ ಜನ ಸಮುದಾಯಕ್ಕೆ ದಾರಿದೀಪವಾಗಲಿ. ಇಂದಿನ ವರಸದ್ಯೋಜಾತ ಶ್ರೀಗಳವರು ಲಿಂ.ಶ್ರೀಗಳವರ ಆದರ್ಶದ ದಾರಿಯಲ್ಲಿ ಮುನ್ನಡೆದು ಮಠದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಶ್ರೀಗಳವರು ಆರು ವರುಷಗಳ ಅವಧಿಯಲ್ಲಿ ಮಾನವೀಯ ಮೌಲ್ಯ, ಧರ್ಮ ಪ್ರಸಾರ ಹೆಚ್ಚಿಸುತ್ತಾ ಐ.ಎ.ಎಸ್., ಕೆಎಎಸ್‌ನಂತಹ ಉನ್ನತ ಹುದ್ದೆಗಳಿಗೆ ತರಬೇತಿ ಕೇಂದ್ರವನ್ನು ತೆರೆಯಲು ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲಿ ಎಂದರು

ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಈ ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ ಕೀರ್ತಿ ಲಿಂ.ಚಂದ್ರಮೌಳೇಶ್ವರ ಶ್ರೀಗಳಿಗೆ ಸಲ್ಲುತ್ತದೆ. (2ನೇ ಪುಟಕ್ಕೆ)

## ಆತ್ಮಸೌಂದರ್ಯ ಹೆಚ್ಚಿಸಿಕೊಳ್ಳುವ ಸಾಧನಗಳು ನಿಮ್ಮಲ್ಲಿಯೇ ಇವೆ

**ರಾಣೇಬೆನ್ನೂರು ಕುರುಬಗೇರಿ ಬನಶಂಕರಿ ದೇವಸ್ಥಾನದ ಕಳಸಾರೋಹಣ ನೆರವೇರಿಸಿದ ತರಳಬಾಳು ಶ್ರೀ**

ರಾಣೇಬೆನ್ನೂರು, ಡಿ.16- ಸೌಂದರ್ಯದಲ್ಲಿ ಎರಡು ವಿಧ. ಒಂದು ಶರೀರದ ಸೌಂದರ್ಯ, ಮತ್ತೊಂದು ಆತ್ಮದ ಸೌಂದರ್ಯ. ಶರೀರದ ಸೌಂದರ್ಯ ಹೆಚ್ಚಿಸಿಕೊಳ್ಳಲು ಸೌಂದರ್ಯ ಸಾಧನಗಳು ಪೇಟೆಯಲ್ಲಿ ದೊರೆಯುತ್ತವೆ. ಆತ್ಮದ ಸೌಂದರ್ಯ ಹೆಚ್ಚಿಸಿಕೊಳ್ಳಲು ಸತ್ಯ, ದಯೆ, ದಾನ-ಧರ್ಮ, ಪ್ರೀತಿ ಮುಂತಾದ ನಿಮ್ಮಲ್ಲಿಯೇ ಇರುವ ಸಾಧನಗಳಿಂದ ಅದು ಸಾಧ್ಯವಾಗಲಿದೆ ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ನುಡಿದರು.

ನಗರದ ಕುರುಬಗೇರಿಯ ಬನಶಂಕರಿ ದೇವಸ್ಥಾನದ ಕಳಸಾರೋಹಣ ನೆರವೇರಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶಿಲ್ಪಶಾಸ್ತ್ರ ದೇವಾಲಯವನ್ನು ಶರೀರಕ್ಕೆ ಹೋಲಿಸಿದರೆ, ದೇಹವನ್ನೇ ದೇವಾಲಯವನ್ನಾಗಿ ಪ್ರತಿಪಾದಿಸಿದವರು ಬಸವಣ್ಣ. ಬಸವಣ್ಣನವರು ದೇವಾಲಯದ ವಿರೋಧಿಗಳಾಗಿರಲಿಲ್ಲ. ಮಸೀದಿ, ಚರ್ಚು, ಗುಡಿ ಎಲ್ಲೆಡೆ ದೇವರಿದ್ದಾನೆ. ಜಾತಿ (2ನೇ ಪುಟಕ್ಕೆ)



## ಕಾರು-ದ್ವಿಚಕ್ರ ವಾಹನ ಡಿಕ್ಕಿ ವೈದ್ಯಕೀಯ ವಿದ್ಯಾರ್ಥಿನಿ ಸಾವು



ದಾವಣಗೆರೆ, ಡಿ.16- ಕಾರು - ದ್ವಿಚಕ್ರ ವಾಹನದ ಮಧ್ಯೆ ನಡೆದ ಅಪಘಾತದಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಧಾರುಣವಾಗಿ ಸಾವನ್ನಪ್ಪಿರುವ ಘಟನೆ ನಗರದ ಎಂಸಿಸಿ ಬಿ ಬ್ಲಾಕ್‌ನ ಈಜುಕೊಳದ ಬಳಿ ಗುರುವಾರ ನಡೆದಿದೆ.

ಬಾಪೂಜಿ ಡೆಂಟಲ್ ಕಾಲೇಜಿನ ಸ್ನಾತಕೋತ್ತರ ಎರಡನೇ ವರ್ಷದ ಪದವಿ ವಿದ್ಯಾರ್ಥಿನಿ ಗುಜರಾತ್‌ನ ವಲ್ಸಾಡ್ ಜಿಲ್ಲೆಯ ಉಂಬರ್‌ಗಾವ್ ಮೂಲದ ಡಾ. ಪ್ರಿಯಾಂಕಾ ಮೊರಾನಿ (25) ಮೃತಪಟ್ಟ ದುರ್ದೈವಿ.

ಡಾ. ಪ್ರಿಯಾಂಕ ದ್ವಿಚಕ್ರ ವಾಹನದಲ್ಲಿ ಕಾಲೇಜಿಗೆ ತೆರಳುತ್ತಿದ್ದರು. ಅದೇ ಸಮಯಕ್ಕೆ ಮಾಮಾಸ್ ಜಾಯಿಂಟ್ ರಸ್ತೆ ಕಡೆಯಿಂದ ಬಂದ ಕೇರಳ ನೋಂದಣಿ ಸಂಖ್ಯೆಯ ಕಾರಿನ ನಡುವೆ ಪರಸ್ಪರ ಡಿಕ್ಕಿ ಸಂಭವಿಸಿದೆ. ದ್ವಿಚಕ್ರವಾಹನದಿಂದ ಕೆಳಗೆ ಬಿದ್ದ ಯುವತಿಯ ತಲೆ ಫುಟ್‌ಪಾತ್‌ನ ಸಿಮೆಂಟ್ ಕಲ್ಲಿಗೆ ಜೋರಾಗಿ (2ನೇ ಪುಟಕ್ಕೆ)

## ಹರಿಹರದಲ್ಲಿ ಭತ್ತ ಮಾರಿದ ಹಣಕ್ಕಾಗಿ ರೈತರ ಪ್ರತಿಭಟನೆ

ಹರಿಹರ, ಡಿ.16- ಹರಿಹರ ತಾಲ್ಲೂಕಿನ ಸಾರಥಿ ಗ್ರಾಮದ 22 ರೈತರು, ತಾವು ಬೆಳೆದ ಭತ್ತ ಮಾರಾಟ ಮಾಡಿದರೂ ಖರೀದಿಸಿದ ವರ್ತಕ ಸಮಯಕ್ಕೆ ಸರಿಯಾಗಿ ಹಣ ನೀಡಿಲ್ಲ ಎಂದು ಪ್ರತಿಭಟನೆ ನಡೆಸಿದ್ದಾರೆ.

ರೈತರು ಭತ್ತವನ್ನು ಪ್ರಶಾಂತ್ ಸ್ವಾಮಿ ಎಂಬುವವರಿಗೆ ಹಲವು ದಿನಗಳ ಕೆಳಗೆ ಮಾರಾಟ ಮಾಡಿದ್ದರು. ಆದರೆ, ಭತ್ತವನ್ನು ಖರೀದಿಸಿದ ವ್ಯಕ್ತಿ ಹಣ ಪಾವತಿಸಿಲ್ಲ ಎಂದು ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳ ಗಮನಕ್ಕೆ ಮಾಹಿತಿ ನೀಡಿ, ನಂತರ ನಗರದ ದೋಸ್ತಾನ ಸಾಮಿಲ್ ಬಳಿ ಧರಣಿ ಮಾಡಿದ್ದಾರೆ.

ಈ ವೇಳೆ ಮಾತನಾಡಿದ ಸಾರಥಿ ಗ್ರಾಮದ ಮಲ್ಲಣ್ಣ, ಯಲ್ಲಪ್ಪ, ಶಿವಪ್ಪ, ಜಗದೀಶ್, ಪರಮೇಶ್ವರಪ್ಪ ಹನುಮಂತಪ್ಪ, ನಿಂಗಪ್ಪ, ಕಿರಣ್ ಅವರು, ನಮ್ಮ ಗ್ರಾಮದ 22 ಕ್ಕೂ ಹೆಚ್ಚು ರೈತರ ಹತ್ತಿರ ಪ್ರಶಾಂತ್ ಸ್ವಾಮಿ ಎಂಬ ಭತ್ತದ ವ್ಯಾಪಾರಿ ಬಂದು ಭತ್ತವನ್ನು ಖರೀದಿ ಮಾಡಿಕೊಂಡಿದ್ದರು. ಅವರು ಭತ್ತವನ್ನು (2ನೇ ಪುಟಕ್ಕೆ)

## ಪಾಲಿಕೆ ಆಡಳಿತ ವಿಫಲ

### ವರ್ಕ್ ಆರ್ಡರ್ ನೀಡಲು ಕಮೀಷನ್, ಕಸ ಸಂಗ್ರಹಣೆ ನೆಪದಲ್ಲಿ ಲೂಟಿ: ವಿಪಕ್ಷ ನಾಯಕ ನಾಗರಾಜ್ ಆರೋಪ



ದಾವಣಗೆರೆ, ಡಿ.16- ಕಾಮಗಾರಿ ವಿಳಂಬ, ವರ್ಕ್ ಆರ್ಡರ್ ನೀಡಲು ಕಮೀಷನ್, ನಡೆಯದ ಸಾಮಾನ್ಯ ಸಭೆ, ಕಸ ಸಂಗ್ರಹಣೆ ನೆಪದಲ್ಲಿ ಲೂಟಿ, ಎನ್‌ಓಸಿ ಕೊಡುವ ದಂಧೆ, ಲಸಿಕೆಗಾಗಿ ಪಾಲಿಕೆ ಸಿಬ್ಬಂದಿ- ಪಾಲಿಕೆ ಕೆಲಸಗಳು ಸ್ಥಗಿತ ...

ಮಹಾನಗರ ಪಾಲಿಕೆ ಮೇಯರ್ ಹಾಗೂ ಆಯುಕ್ತರ ಮೇಲೆ ವಿಪಕ್ಷ ನಾಯಕ ಎ.ನಾಗರಾಜ್ ಮಾಡಿದ ಆರೋಪಗಳ ಪಟ್ಟಿ ಇದು.

ಪಾಲಿಕೆ ಆಡಳಿತ ವೈಖರಿ ಬಗ್ಗೆ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ನಗರದ ಅಭಿವೃದ್ಧಿಯಲ್ಲಿ ಪಾಲಿಕೆ ಆಡಳಿತ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿದರು.

ಮೇಯರ್ ಅವರು ಅಧಿಕಾರ ವಹಿಸಿಕೊಂಡು 10 ತಿಂಗಳು ಕಳೆದರೂ ನಗರದ 45 ವಾರ್ಡ್‌ಗಳಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾಮಗಾರಿ ನಡೆದಿಲ್ಲ ಎಂದು ಹೇಳಿದರು.

ಮುಖ್ಯಮಂತ್ರಿಗಳ ಅನುದಾನದ ನಗರೋತ್ಥಾನ ಕಾಮಗಾರಿ ವಿಳಂಬವಾಗುತ್ತಿದೆ. ಪ್ರಶ್ನಿಸಿದರೆ ಫೈನಾನ್ಸ್ ಬಿಡ್, ಟೆಂಡರ್ ಬಿಡ್ ಎಂದು ಸಬೂಬು ಹೇಳುತ್ತಿದ್ದಾರೆ. ಸೆ.13 ರಂದು ನಡೆದ ಸ್ಥಾಯಿ ಸಮಿತಿ ಸಭೆಯಲ್ಲಿ 15ನೇ ಹಣಕಾಸು ಯೋಜನೆಯಡಿ 25 ಕೋಟಿ ರೂ. ಕಾಮಗಾರಿಗೆ ಅನುಮೋದನೆ ನೀಡಿದ್ದರೂ, ಟೆಂಡರ್ ಕರೆಯುವಲ್ಲಿ ವಿಳಂಬ ನೀತಿ ಅನುಸರಿಸಲಾಗುತ್ತಿದೆ. ಇದು ಮೇಯರ್ ಹಾಗೂ ಆಯುಕ್ತರ ನಿರಾಸಕ್ತಿಗೆ ಕೈಗನ್ನಡಿಯಾಗಿದೆ ಎಂದರು.

ಕೊರೊನಾ ಲಸಿಕೆ ನೀಡುವ ಕಾರ್ಯಕ್ಕೆ ಎಂದು ಪಾಲಿಕೆ ಅಧಿಕಾರಿ (2ನೇ ಪುಟಕ್ಕೆ)

## 40 ಪರ್ಸೆಂಟ್ ಸರ್ಕಾರದ ವಿರುದ್ಧ ಜಾಥಾ

**ಕಾಂಗ್ರೆಸ್ ನಾಯಕರಿಂದ ಮೆರವಣಿಗೆ, ಟ್ರ್ಯಾಕ್ಟರ್ ರ‍್ಯಾಲಿ, ಸುವರ್ಣ ಸೌಧಕ್ಕೆ ಮುತ್ತಿಗೆ ಯತ್ನ**

ಬೆಳಗಾವಿ, ಡಿ. 16 - ಆಡಳಿತಾರೂಢ ಬಿಜೆಪಿ ಮಿತಿಮೀರಿದ ಭ್ರಷ್ಟಾಚಾರ ನಡೆಸುತ್ತಿದೆ, ರೈತರ ಸಂಕಷ್ಟಕ್ಕೆ ನೆರವಾಗುತ್ತಿಲ್ಲ. ಮತಾಂತರ ನಿಷೇಧ ಕಾಯ್ದೆ ಬಲವಂತವಾಗಿ ಜಾರಿಗೆ ತರುತ್ತಿದೆ ಎಂದು ವಿರೋಧಿಸಿ, ಕಾಂಗ್ರೆಸ್ ಇಂದು ಬೆಳಗಾವಿಯಲ್ಲಿ ಬೃಹತ್ ಜಾಥಾ ನಡೆಸಿ ಸುವರ್ಣ ಸೌಧದ ಮುತ್ತಿಗೆಗೆ ಮುಂದಾಯಿತು.

ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ನೋಂದಾಯಿತ ಅಧಿಕೃತ ಗುತ್ತಿಗೆದಾರರ ಸಂಘವೇ 40 ಪರ್ಸೆಂಟ್ ಸರ್ಕಾರ ಎಂದು ಪ್ರಧಾನಿಯವರಿಗೆ ದೂರು ನೀಡಿದೆ.

ಸರ್ಕಾರ ವೈಫಲ್ಯಗಳ ಸರಮಾಲೆಯಲ್ಲಿ ಸಿಲುಕಿದೆ ಎಂದು ಆರೋಪಿಸಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಎಸ್.ಆರ್. ಪಾಟೀಲ್ ಸೇರಿದಂತೆ, ಹಿರಿಯ ಶಾಸಕರು ಮೆರವಣಿಗೆ ನಡೆಸಿ, ಸುವರ್ಣ ಸೌಧ ಮುತ್ತಿಗೆ ಹಾಕುವ ಪ್ರಯತ್ನ ನಡೆಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಸುವರ್ಣ ಸೌಧದವರೆಗೂ ಟ್ರ್ಯಾಕ್ಟರ್ ರ‍್ಯಾಲಿ ನಡೆಸಿ, ಮುಖಂಡರು ಸೌಧದೊಳಗೆ ನುಗ್ಗಿಸಲು ಪ್ರಯತ್ನಿಸಿದರು.

ಈ ಸಂದರ್ಭದಲ್ಲಿ ಸಾವಿರಾರು ಕಾರ್ಯಕರ್ತರು ತಮ್ಮ ನಾಯಕರ ಬೆಂಬಲಕ್ಕೆ ನಿಂತು, ತಡೆಗೋಡೆಗಳನ್ನು ತೆರೆಯುವ ಪ್ರಯತ್ನ ಮಾಡಿದರು.

ಪೊಲೀಸರ ಬಿಗಿ ಬಂದೋಬಸ್ತ್ ನಡುವೆಯೂ ಮುಖಂಡರು ನುಗ್ಗುವ ಪ್ರಯತ್ನ ಮಾಡಿದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ, ಶಿವಕುಮಾರ್ ಮತ್ತು (3ನೇ ಪುಟಕ್ಕೆ)

## ರಾಜ್ಯದಲ್ಲಿ ಐವರು ಓಮಿಕ್ರಾನ್ ಸೋಂಕಿತರು ಪತ್ತೆ

ಬೆಂಗಳೂರು, ಡಿ. 16 – ರಾಜ್ಯದಲ್ಲಿ ಐವರು ಓಮಿಕ್ರಾನ್ ಸೋಂಕಿತರು ಕಂಡು ಬಂದಿರುವುದಾಗಿ ರಾಜ್ಯ ಆರೋಗ್ಯ ಸಚಿವ ಕೆ. ಸುಧಾಕರ್ ತಿಳಿಸಿದ್ದಾರೆ. ಬ್ರಿಟನ್‌ನಿಂದ ಬಂದ 19 ವರ್ಷದ ಪುರುಷ, ದೆಹಲಿಯಿಂದ ಬಂದ 36 ವರ್ಷದ ಪುರುಷ, ದೆಹಲಿಯಿಂದ ಬಂದ 70 ವರ್ಷದ ಮಹಿಳೆ, ನೈಜೀರಿಯಾದಿಂದ ಬಂದ 62 ವರ್ಷದ ಪುರುಷ ಹಾಗೂ ದಕ್ಷಿಣ ಆಫ್ರಿಕಾದಿಂದ ಬಂದ 33 ವರ್ಷದ ಮಹಿಳೆಯರಲ್ಲಿ ಸೋಂಕಿರುವುದು ಕಂಡು ಬಂದಿದೆ ಎಂದವರು ಹೇಳಿದ್ದಾರೆ. ಇದಕ್ಕೂ ಮುಂಚೆ ರಾಜ್ಯದ ಮೂವರಲ್ಲಿ ಓಮಿಕ್ರಾನ್ ಸೋಂಕಿರುವುದು ಕಂಡು ಬಂದಿತ್ತು.

**ಮಹಿಳಾ ಪಿ.ಜಿ.**
ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ ದಾವಣಗೆರೆ.
**90601 72745**

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ ಅರ್ಧ ಪರ್ಸೆಂಟ್ ಕಮೀಷನ್‌ಗೆ ($^1/_2$%) ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ. ಕೆಲವೇ ದಿನಗಳು ಮಾತ್ರ.
ಕಿರಣ್ ಬೂಸ್ನೂರ್ : 98440-63409
ಷರತ್ತುಗಳು ಅನ್ವಯಿಸುತ್ತವೆ *


## ಸ್ಕ್ಯಾನ್‌ಗೆ ಹೆಚ್ಚಿನ ದರ ವಸೂಲಿ ಮಾಡಿದರೆ ಕ್ರಮ

**(1ನೇ ಪುಟದಿಂದ)** ವಿಲೇವಾರಿಗಾಗಿ ಸರ್ಕಾರ ನಿಗದಿಪಡಿಸಿರುವ ದರದಂತೆ ಮೊತ್ತವನ್ನು ಸಂಬಂಧಪಟ್ಟವರಿಗೆ ಪಾವತಿಸಬೇಕೆಂದು ತಿಳಿಸಿದರು.

ನೋಡಲ್ ಅಧಿಕಾರಿ ಡಾ. ರೇಣುಕಾರಾಧ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್ ಮಾತನಾಡಿದರು.

ಸಭೆಯಲ್ಲಿ ಜಿ.ಪಂ. ಸಿಇಓ ಡಾ. ವಿಜಯ ಮಹಾಂತೇಶ್ ದಾನಮ್ಮನವರ್, ಡಿಹೆಚ್‌ಓ ಡಾ. ನಾಗರಾಜ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಐಎಂಎ ಅಧ್ಯಕ್ಷ ಡಾ. ಸೋಮಶೇಖರ್ ಸೇರಿದಂತೆ ಮತ್ತಿತರರಿದ್ದರು.

# ಮಹಿಳೆಯರ ಮದುವೆ ವಯಸ್ಸು ಹೆಚ್ಚಿಸುವುದರಿಂದ ಅಪರಾಧಗಳು ಹೆಚ್ಚಳ

**ಕೇಂದ್ರ ಸರ್ಕಾರದ ಪ್ರಸ್ತಾಪಿತ ಕ್ರಮಕ್ಕೆ ಪರಿಣಿತರ ಆಕ್ಷೇಪ**

ನವದೆಹಲಿ, ಡಿ. 16 – ಕೇಂದ್ರ ಸರ್ಕಾರ ಮಹಿಳೆಯರು ಮದುವೆಯಾಗಲು ಇರುವ ಕನಿಷ್ಠ ವಯಸ್ಸನ್ನು 21ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರ ಮುಂದಾಗಿರುವುದಕ್ಕೆ ಈ ವಲಯದ ಪರಿಣಿತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಸಾಕಷ್ಟು ಮದುವೆಗಳು 18 ವರ್ಷದೊಳಗೆ ನಡೆಯುತ್ತಿವೆ. ಮದುವೆಯ ವಯಸ್ಸನ್ನು 21ಕ್ಕೆ ಹೆಚ್ಚಿಸುವುದರಿಂದ ದೇಶದ ಅರ್ಧದಷ್ಟು ಮದುವೆಗಳು ಅಸಿಂಧುವಾಗಲಿವೆ ಹಾಗೂ ಅಪರಾಧವಾಗಲಿವೆ ಎಂದವರು ಕಳವಳ ವ್ಯಕ್ತಪಡಿಸಿದ್ದಾರೆ.

ಆಕ್ಸ್‌ಫಾಮ್ ಇಂಡಿಯಾದ ಲಿಂಗ ನ್ಯಾಯ ಪರಿಣಿತರಾದ ಅಮಿತಾ ಪಿತ್ರೆ ಹೇಳಿಕೆ ನೀಡಿದ್ದು, ಎನ್‌ಎಫ್.ಹೆಚ್.ಎಸ್. 5 ವರದಿಯ ಪ್ರಕಾರ 18 ವರ್ಷದೊಳಗೆ ಮದುವೆಯಾಗುವ ಮಹಿಳೆಯರ ಪ್ರಮಾಣ ದೇಶದಲ್ಲಿ ಶೇ.23ರಷ್ಟಿದೆ ಎಂದಿದ್ದಾರೆ.

ಈಗ ಮದುವೆಯ ವಯಸ್ಸನ್ನು 21ಕ್ಕೆ ಹೆಚ್ಚಿಸುವುದರಿಂದ, ನಿಗದಿತ ವಯೋಮಾನದ ಒಳಗೇ ಮದುವೆಯಾಗುವವರ ಪ್ರಮಾಣ ಶೇ.50 ರಿಂದ 60ಕ್ಕೆ ತಲುಪಲಿದೆ. ಭವಿಷ್ಯದಲ್ಲಿ ಇಂತಹ ಎಲ್ಲ ಮದುವೆಗಳು ಅಪರಾಧವಾಗಲಿವೆ ಎಂದವರು ಹೇಳಿದ್ದಾರೆ.

1978ರಿಂದಲೂ ಮದುವೆಯ ಕನಿಷ್ಠ ವಯಸ್ಸು 18 ಆಗಿದೆ. ಕೇವಲ ಕಾನೂನು ಜಾರಿಗೆ ತರುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. 21 ವರ್ಷದ ಒಳಗಿನವರು ಮದುವೆ ಮಾಡಿಕೊಳ್ಳಬಾರದೆಂದು ಕಾನೂನು ಈಗ ಇಲ್ಲದಿದ್ದರೂ ಸಹ ಮೇಲ್ವರ್ಗ ಹಾಗೂ ಮಧ್ಯಮ ವರ್ಗದ ಸಾಕಷ್ಟು ಮಹಿಳೆಯರು 21ರ ವಯಸ್ಸು ಮೀರಿ ಮದುವೆಯಾಗುತ್ತಿದ್ದಾರೆ ಎಂದವರು ತಿಳಿಸಿದ್ದಾರೆ.

ಪ್ರಸಕ್ತ 18 ವರ್ಷದೊಳಗೆ ಮದುವೆಗಳು ನಡೆಯುತ್ತಿರುವುದರಿಂದ ಸಾಕಷ್ಟು ಅಪರಾಧಗಳು ಆಗುತ್ತಿವೆ. ಮದುವೆಯ ವಯಸ್ಸನ್ನು 21ಕ್ಕೆ ಹೆಚ್ಚಿಸುವುದರಿಂದ ಅಪರಾಧ ಪ್ರಕರಣಗಳು ಇನ್ನಷ್ಟು ಹೆಚ್ಚಾಗಲಿವೆ ಎಂದವರು ಹೇಳಿದ್ದಾರೆ.

ಮದುವೆಯ ವಯಸ್ಸು ಹೆಚ್ಚಿಸುವುದರಿಂದ ಹಾವಿಗೆ ಬದಲು ಹುತ್ತಕ್ಕೆ ಬಡಿದಂತಾಗುತ್ತದೆ ಎಂದು ಪಾಪ್ಯುಲೇಷನ್ ಫೌಂಡೇಷನ್ ಆಫ್ ಇಂಡಿಯಾ ಅಭಿಪ್ರಾಯ ಪಟ್ಟಿದೆ.

ಈ ಬಗ್ಗೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಪಾಪ್ಯುಲೇಷನ್ ಫೌಂಡೇಷನ್ ಆಫ್ ಇಂಡಿಯಾ, ಶತಮಾನದಿಂದ ಸಣ್ಣ ವಯಸ್ಸಿನಲ್ಲಿ ಮದುವೆ ಮಾಡುವ ಪದ್ಧತಿ ಇದೆ. ಲಿಂಗ ತಾರತಮ್ಯ, ಹಣಕಾಸು ಅಸುರಕ್ಷತೆ, ಗುಣಮಟ್ಟದ ಶಿಕ್ಷಣದ ಕೊರತೆ ಹಾಗೂ ಉದ್ಯೋಗಾವಕಾಶ ಕಡಿಮೆ ಇರುವುದರಿಂದ ಚಿಕ್ಕ ವಯಸ್ಸಿನಲ್ಲಿ ಮದುವೆಗಳು ನಡೆಯುತ್ತಿವೆ ಎಂದು ತಿಳಿಸಿದೆ.

ಪೌಷ್ಠಿಕಾಂಶದ ಪರಿಣಿತರಾಗಿರುವ ಶೀಲಾ ಸಿ. ವೀರ್ ಈ ಬಗ್ಗೆ ಹೇಳಿಕೆ ನೀಡಿದ್ದು, ಮಹಿಳೆಯರ ಮದುವೆಯ ಕಾನೂನುಬದ್ಧ ವಯಸ್ಸು ನಿಗದಿಗೆ ಮುಂಚೆ ವಿವಿಧ ಭೂಗೋಳಿಕ ಪ್ರದೇಶಗಳಲ್ಲಿ ಇರುವ ವೈವಿಧ್ಯತೆಗಳನ್ನು ಪರಿಗಣಿಸಬೇಕಿದೆ ಎಂದಿದ್ದಾರೆ.

## ಮದುವೆ ವಯಸ್ಸು ಹೆಚ್ಚಳಕ್ಕೆ ಕೇಂದ್ರದ ನಿರ್ಧಾರ

**(1ನೇ ಪುಟದಿಂದ)** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಳೆದ ವರ್ಷ ಹೇಳಿಕೆಯೊಂದನ್ನು ನೀಡಿ, ಮಹಿಳೆಯರ ಮದುವೆಯ ಕನಿಷ್ಠ ವಯೋಮಾನದ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ ಎಂದು ಹೇಳಿದ್ದರು.

ಸಮತಾ ಪಾರ್ಟಿಯ ಮಾಜಿ ಅಧ್ಯಕ್ಷೆ ಜಯಾ ಜೇಟ್ಲಿ ಅವರ ನೇತೃತ್ವದ ನಾಲ್ವರು ಸದಸ್ಯರ ಕಾರ್ಯಪಡೆ ವಯೋಮಿತಿಯಲ್ಲಿ ಬದಲಾವಣೆಯ ಬಗ್ಗೆ ಶಿಫಾರಸ್ಸು ಮಾಡಿತ್ತು.

ಈ ಬಗ್ಗೆ ಮಾತನಾಡಿರುವ ಜೇಟ್ಲಿ, ಲಿಂಗ ಸಮಾನತೆ ಹಾಗೂ ಲಿಂಗ ಸಬಲೀಕರಣದ ದೃಷ್ಟಿಯಿಂದ ಈ ಶಿಫಾರಸ್ಸು ಮಾಡಲಾಗಿದೆ. ಮಹಿಳೆಯರ ಮದುವೆಯ ಮಿತಿಯನ್ನು 18 ವರ್ಷಕ್ಕೆ ನಿಗದಿ ಪಡಿಸಿರುವುದರಿಂದ ಅವರು ಉನ್ನತ ಹಂತದಲ್ಲಿ ಕಲಿಯುವುದಕ್ಕೆ ತೊಡಕಾಗುತ್ತಿದೆ ಎಂದಿದ್ದಾರೆ.


**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಮತ್ತು 3 ಬೆಡ್ ರೂಂ, ಪೂಜಾ ರೂಂ ಇರುವ ವಿಶಾಲವಾದ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
**87622-21972**

**ಬೇಕಾಗಿದ್ದಾರೆ**
ರಿಸಿಪ್ಷನಿಸ್ಟ್ : ಪುರುಷರು
ಸಂಪರ್ಕ :
ಮೊ: 97393 46349
92429 40661
ವಿಶ್ವಾಸ್ ಹೈಟೆಕ್ ಡಯಾಗ್ನಸ್ಟಿಕ್ ಸೆಂಟರ್
'ಸಿಧಿ' 413/1, 8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ-577002.

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
**94838 62779**

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಸುತ್ತಮುತ್ತ ಇರುವ ಅಂದರೆ ಸೆಕ್ಯೂರಿಟೀಸ್ ಮತ್ತು ರಿಸಪ್ಷನ್, ರೂಂ ಬಾಯ್ಸ್ ಮತ್ತು ರಾಣೇಬೆನ್ನೂರು ತಾ॥ ಹೀಲದಹಳ್ಳಿ ಸೆಕ್ಯೂರಿಟೀಸ್ ಬೇಕಾಗಿದ್ದಾರೆ. ಕೆಲವೆಡೆ ಊಟದ ವ್ಯವಸ್ಥೆ ಇರುತ್ತದೆ ಮತ್ತು ಲಾಡ್ಜ್‌ಗೆ ರಿಸೆಪ್ಷನ್ ಮತ್ತು ಬೆಂಗಳೂರಿನಲ್ಲಿ ಫ್ಯಾಮಿಲಿ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಕೂಡಲೇ ಸಂಪರ್ಕಿಸಿ ಮತ್ತು ಆವರಗೆರೆಯಲ್ಲಿ ಬೇಕಾಗಿದ್ದಾರೆ.
74113 07071, 98806 48207

**ಮನೆ ಬಾಡಿಗೆಗೆ ಇದೆ**
ನಂ. 21, ದೇವರಾಜ ಅರಸು ಬಡಾವಣೆ, ಎ ಬ್ಲಾಕ್, ಹೊಸ ಕೋರ್ಟ್ ಪಾರ್ಕ್ ಹತ್ತಿರ, 5ನೇ ಕ್ರಾಸ್.
**99012 47050**
**63643 14502**

**ಬೇಕಾಗಿದ್ದಾರೆ**
20-25 ವಯೋಮಾದ SSLC Pass/Fail ಆದ ಯುವಕ/ಯುವತಿಯರು ನ್ಯುರೋಥೆರಪಿ ಕ್ಲಿನಿಕ್‌ನಲ್ಲಿ ಸಹಾಯಕ ಥೆರಪಿಸ್ಟ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ :
**99726 00713**

**WALK IN INTERVIEW FOR LECTURER POST**
1) M.Tech & B.E. In Mechanicle, Civil, Computer Science & E&E
2) M.SC In Biology, Mathematics
SAMRUDDHI ACADEMY
**63646 40296**

**ಜಮೀನಿನ ಪತ್ರ ಕಳೆದಿದೆ**
ದಿ. 2.10.2021ರಂದು ಜಮೀನಿನ ಪತ್ರವಿರುವ ಲೆಟರ್ ಬ್ಯಾಗ್ ಕಳೆದಿರುತ್ತದೆ. ದಯಮಾಡಿ ಸಿಕ್ಕರೆ ಈ ನಂಬರ್‌ಗೆ ಫೋನ್ ಮಾಡಿ
**98449 76445**

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೋರಿಯರ್ ಡೆಲಿವರಿ (Delivary) ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler Bike ಇರಬೇಕು. Petrol ಭತ್ಯೆ ಕೊಡಲಾಗುವುದು. ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ.
94807 95548, 98800 42597
(whatsapp no) 70199 83025

**ಟಿರು ಫಿಲ್ಮ್ ಅಕಾಡೆಮಿ ದಾವಣಗೆರೆ**
ಆನಂತರ ಕಿಸಾನ್ ಟಿವಿ ಎಂಬ ಕನ್ನಡ ಕಾಮಿಡಿ ಸಿನಿಮಾ ನಿರ್ಮಿಸಲು ಸಹ ನಿರ್ಮಾಪಕರು, ಹೂಡಿಕೆದಾರರು ಬೇಕಾಗಿದ್ದಾರೆ. ಸಂಪರ್ಕಿಸಿ
86609 55913, 91104 16055

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಎ ಬ್ಲಾಕ್, ಚರ್ಚ್ ರಸ್ತೆಯಲ್ಲಿ 24 ತಾಸು ನೀರಿನ ವ್ಯವಸ್ಥೆ ಇರುವ 1 ಬೆಡ್ ರೂಂನ ಮಹಡಿ ಮನೆ ಬಾಡಿಗೆಗೆ ಇರುತ್ತದೆ. (ಸಸ್ಯಹಾರಿಗಳಿಗೆ ಮಾತ್ರ). ಆಸಕ್ತರು ಸಂಪರ್ಕಿಸಿ :
**98442 28851**

**ಜಮೀನು ಮಾರಾಟಕ್ಕಿದೆ**
ಹಗರಿ ಬೊಮ್ಮನಹಳ್ಳಿ ಯಿಂದ 4 ಕೀ.ಮೀ ದೂರ 39 ಎಕರೆ ಜಮೀನು ಮಾರಾಟಕ್ಕಿದೆ. ಹರಪನಹಳ್ಳಿ KHB ಕಾಲೋನಿ ಪಕ್ಕದಲ್ಲಿ 4 ಎಕರೆ 20 ಗುಂಟೆ ಜಮೀನು ಮಾರಾಟಕ್ಕಿದೆ.
**97418 11694**


## ಜನಾಂಗೀಯ ಸಂಘರ್ಷಕ್ಕೆ ದಾರಿ: ರಂಭಾಪುರಿ ಶ್ರೀ

**(1ನೇ ಪುಟದಿಂದ)** ತ್ಯಾಗಮಯ ಜೀವನಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದವರು, ಕಾಯಕದ ಜತೆಗೆ ಶಿಕ್ಷಣ, ಧರ್ಮ ಪ್ರಸಾರದೊಂದಿಗೆ ಸಾಮಾಜಿಕ ಕಳಕಳಿಯಿಂದ ಶ್ರೀಮಠ ಎತ್ತರಕ್ಕೆ ಬೆಳೆಯಲು ಕಾರಣರಾಗಿದ್ದಾರೆ ಎಂದು ತಿಳಿಸಿದರು.

ಹರಪನಹಳ್ಳಿ ಒಳಗೊಂಡು 65 ಕಡೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಬೆಳೆಸುವ ಮೂಲಕ ಶೈಕ್ಷಣಿಕ ಕ್ರಾಂತಿಗೆ ಪ್ರಸಿದ್ದಿಯಾಗಿದ್ದಾರೆ. ವೀರಶೈವ ಧರ್ಮ ಸಂಸ್ಕೃತಿ ಬೆಳೆಸುವ, ಭಕ್ತರಿಗೆ ಸಂಸ್ಕಾರ ಕೊಡುವ, ಸಾಮಾಜಿಕ ಕಾರ್ಯಗಳನ್ನು ಮಾಡುವುದೇ ನಮ್ಮ ಗುರಿಯಾಗಿದೆ ಎಂದರು.

ಜೆ.ಡಿ.ಎಸ್.ಪ್ರಧಾನ ಕಾರ್ಯದರ್ಶಿ ಎಂ. ಶ್ರೀಕಾಂತ ಸಮಾರಂಭ ಉದ್ಘಾಟಿಸಿದರು. ಹೊನ್ನಾಳಿ ಹಿರೇಕಲ್ಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು.

ಮಠದ ಆಡಳಿತಾಧಿಕಾರಿ ಟಿ.ಎಂ. ಚಂದ್ರಶೇಖರಯ್ಯ, ಮಾನಿಹಳ್ಳಿ ಮಳೆಯೋಗೀಶ್ವರ ಶ್ರೀಗಳು, ನೆಗಳೂರು ಗುರುಶಾಂತೇಶ್ವರ ಶ್ರೀಗಳು, ಕೂಡ್ಲಿಗಿ ಪ್ರಶಾಂತ ಶ್ರೀಗಳು, ಕುವೆಂಪು ವಿವಿ ಕುಲಪತಿ ಡಾ.ಬಿ.ಪಿ.ವೀರಭದ್ರಪ್ಪ ಮಾತನಾಡಿದರು.

ಬಿ.ಇಡಿ. ಕಾಲೇಜು ಪ್ರಾಚಾರ್ಯ ಟಿ.ಎಂ.ರಾಜಶೇಖರ್ ಸೇರಿದಂತೆ, ಅರುಣಕುಮಾರ, ನಾಗೇಂದ್ರ ರಾವ್, ಶಾಂತಾ ಆನಂದ, ಎಂ.ಪಿ.ಎಂ.ಶಾಂತವೀರಯ್ಯ, ವೀರನಗೌಡ, ಸಿ.ಎಂ.ಕೊಟ್ರಯ್ಯ, ನಾಗನಗೌಡ್ರು, ಮಲ್ಲಿಕಾರ್ಜುನ ಕಲ್ಮಠ ಮತ್ತಿತರರು ಭಾಗವಹಿಸಿದ್ದರು.

## ಸ್ವಲ್ಪ ಕಾಲ ಜೊತೆಯಾಗಿದ್ದ ಮಾತ್ರಕ್ಕೆ ಲಿವ್ ಇನ್ ಆಗದು



ಚಂಡೀಘಡ, ಡಿ. 16 – ಇಬ್ಬರು ವಯಸ್ಕರು ಕೆಲ ಕಾಲ ಜೊತೆಯಾಗಿದ್ದರು ಎಂಬ ಮಾತ್ರಕ್ಕೆ ಅದು ಲಿವ್ ಇನ್ ಸಂಬಂಧವಾಗುವುದಿಲ್ಲ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಮನೋಜ್ ಬಜಾಜ್ ಅವರ ಪೀಠ ಈ ಬಗ್ಗೆ ಆದೇಶ ವೊಂದನ್ನು ಹೊರಡಿಸಿದ್ದು, ಲಿವ್ - ಇನ್‌ನಲ್ಲಿರುವ ಜೋಡಿಗಳು ನಿರ್ದಿಷ್ಟ ಕಾಲ ಜೊತೆಯಾಗಿರಬೇಕು ಹಾಗೂ ಮದುವೆಯ ಸಂಬಂಧಗಳ ರೀತಿಯಲ್ಲೇ ಜವಾಬ್ದಾರಿಗಳನ್ನು ನಿರ್ವಹಿಸಿರಬೇಕು ಎಂದು ಹೇಳಿದ್ದಾರೆ.

ಹರಿಯಾಣದ ಯಮುನಾನಗರ ಜಿಲ್ಲೆಯ ಜೋಡಿ ಅರ್ಜಿಯೊಂದನ್ನು ಸಲ್ಲಿಸಿ, ತಮಗೆ ಮಹಿಳೆಯರ ಕುಟುಂಬದಿಂದ ರಕ್ಷಣೆ ನೀಡಬೇಕು ಎಂದು ಕೋರಿದ್ದರು. ನ್ಯಾಯಾಲಯ ಈ ಅರ್ಜಿಯನ್ನು ತಳ್ಳಿ ಹಾಕಿದೆ. ಅರ್ಜಿದಾರರಿಗೆ 25 ಸಾವಿರ ರೂ.ಗಳ ದಂಡವನ್ನೂ ವಿಧಿಸಲಾಗಿದೆ.

ಇಬ್ಬರು ವಯಸ್ಕರು ಕೆಲ ದಿನಗಳ ಕಾಲ ಜೊತೆಯಲ್ಲಿದ್ದ ಮಾತ್ರಕ್ಕೆ ಅದು ಲಿವ್ ಇನ್ ಸಂಬಂಧವಾಗುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. 18 ವರ್ಷದ ಮಹಿಳೆ ಹಾಗೂ 20 ವರ್ಷದ ಪುರುಷ ಪ್ರೀತಿಸುತ್ತಿದ್ದು, ಅವರು ಜೊತೆಯಾಗಿದ್ದರು. ಹುಡುಗಿಯ ಕಡೆಯವರು ಈ ಸಂಬಂಧವನ್ನು ವಿರೋಧಿಸಿದ್ದರು. ಮಹಿಳೆ ಮನೆ ಬಿಟ್ಟು ಲಿವ್ - ಇನ್ ಸಂಬಂಧದಲ್ಲಿದ್ದರು.

ಕಳೆದ ನವೆಂಬರ್ 24, 2021ರಿಂದ ಉಭಯರು ಲಿವ್ ಇನ್ ಸಂಬಂಧದಲಿದ್ದಾರೆ ಎಂದು ಅರ್ಜಿದಾರರ ಪರ ವಕೀಲರು ಹೇಳಿದ್ದರು. ಆದರೆ, ಅರ್ಜಿದಾರರು ತಮಗೆ ಬೆದರಿಕೆ ಇದೆ ಎಂದು ಹೇಳಿರುವುದರಲ್ಲಿ ಸತ್ಯವಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.


**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ಗೆ ಡಿ.ಫಾರ್ಮ ಸರ್ಟಿಫಿಕೇಟ್ ಹೊಂದಿರುವವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
**98861 09946**

**ಓಂ ಶ್ರೀ ಸರ್ವಶಕ್ತಿ ಹುಲಿಗೆಮ್ಮ ಜ್ಯೋತಿಷ್ಯಾಲಯ**
ಪಂಡಿತ್ ದುರ್ಗಾಪ್ರಸಾದ್ ಗುರೂಜಿ
ಫೋನಿನ ಮೂಲಕ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಪ್ರೀತಿಯಲ್ಲಿ ಮೋಸ, ಮನೆಯಲ್ಲಿ ಅಶಾಂತಿ, ಸಾಲಬಾಧೆ, ಗಂಡ ಹೆಂಡತಿ ಕಿರಿಕಿರಿ ಇನ್ನಿತರೆ ಯಾವುದೇ ಸಮಸ್ಯೆಗಳಿಗೆ ಅತಿ ಶೀಘ್ರದಲ್ಲಿ ಪರಿಹಾರ.
ವಿಳಾಸ : ಹೈಸ್ಕೂಲ್ ಫೀಲ್ಡ್ ಪ್ರೈವೇಟ್ ಬಸ್ ಸ್ಟ್ಯಾಂಡ್, ಮಳಿಗೆ ನಂ.24, ದಾವಣಗೆರೆ.
96203 05966, 73533 36000

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಬೇಕಾಗಿದ್ದಾರೆ**
ಪೇಂಟ್ ಕಂಪನಿಯಲ್ಲಿ ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿ.ಸೂ: ಕನಿಷ್ಠ ಒಂದು ವರ್ಷ ಅನುಭವ ಇರುವವರಿಗೆ ಆದ್ಯತೆ.
**74119 13202**

**PHOTOSHOP & CORELDRAW CLASSES**
IN ALLPHABIT TECHNOLOGIES
CLASSES ALSO FOR
* C,C++ JAVA.
* CIVIL, MECHANICAL CADD
* CYBER SECURITY & ETHICAL HACKING.
* PYTHON MACHINE LEARNING.
8217624367, 8971279127

**ಮಹಿಳೆಯರು ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಸ್ಟಾಕ್ ಚೆಕ್ಕಿಂಗ್ ಹಾಗೂ ಕಂಪ್ಯೂಟರ್ ಬಿಲ್ಲಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವವಿರುವವರಿಗೆ ಹಾಗೂ ದಾವಣಗೆರೆಯಲ್ಲಿ ವಾಸವಿದ್ದವರಿಗೆ ಆದ್ಯತೆ.
ವಿಳಾಸ: ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
2ನೇ ಮೇನ್, ಕೆ.ಟಿ.ಜೆ ನಗರ, ದಾವಣಗೆರೆ-2
**86607 75329**

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ: ಪಿಯುಸಿ, ವಯಸ್ಸು 18 ವರ್ಷ ಮೇಲ್ಪಟ್ಟು, ವೇತನ ರೂ.9,000-12,000 ವರೆಗೆ ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು. ದ್ವಿಚಕ್ರವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿಎಲ್-ಆರ್‌ಸಿ ಕಾರ್ಡ್ ಹೊಂದಿರಬೇಕು.
ಎಸ್.ಕೆ.ಎಸ್. ಅಗ್ರಿಟೆಕ್ ಪ್ಲಾಂಟೇಷನ್ ಪ್ರೈ.ಲಿ. ಎಸ್‌ಎಸ್ ಹೈಟೆಕ್ ಆಸ್ಪತ್ರೆ ಮುಖ್ಯರಸ್ತೆ, ಲಕ್ಷ್ಮಿ ಬಡಾವಣೆ, ದಾವಣಗೆರೆ.
89514 55892, 99023 42040, 81500 67146

**ನಿವೇಶನ ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 30×48 (ಉತ್ತರ), 30×35 (ಪಶ್ಚಿಮ), ಎಸ್.ಎಸ್ ಬಡಾವಣೆಯಲ್ಲಿ 40×60 ಉತ್ತರ , ಜೋಡಿ ಸೈಟು ಮಾರಾಟಕ್ಕಿವೆ.
**97418 11694**

**ತಕ್ಷಣವೇ ಬೇಕಾಗಿದ್ದಾರೆ**
ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡಲು Night & Day Security, Asst Cook (Male), Warden Cum PE Teacher, ತಕ್ಷಣವೇ ಬೇಕಾಗಿದ್ದಾರೆ.
(ವಸತಿ ನಿಲಯದಲ್ಲಿ ಇರುವವರಿಗೆ ಮೊದಲ ಆದ್ಯತೆ)
ಆಸಕ್ತರು ತಕ್ಷಣವೇ ಸಂಪರ್ಕಿಸಿ
**96207 68987**

**ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕಾರ್ಯನಿರ್ವಹಿಸಲು PUC, BA/BSc B.Ed. ಆಗಿರುವ ಮೂವರು ಮಹಿಳಾ ವಾರ್ಡನ್‌ಗಳು ಹಾಗೂ BSc B.Ed. (PM) ಆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ
**91106 79096**

**ಬೇಕಾಗಿದ್ದಾರೆ**
ಸಾಮಾಜಿಕ ಜಾಲತಾಣಗಳಲ್ಲಿ ಆಸಕ್ತಿ ಇರುವ ಯುವಕರು ಬೇಕಾಗಿದ್ದಾರೆ.
ವಿನ್ನರ್ಸ್ ಕರಿಯರ್ ಅಕಾಡೆಮಿ
ದಾವಣಗೆರೆ.
98869 97892, 99865 20992

**ಶಿಕ್ಷಕಿಯರು ಬೇಕಾಗಿದ್ದಾರೆ**
B.A., B.Com, B.Sc ಹಾಗೂ PUC, NTC ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
**99640 17729**

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
**77603 16576**
**90080 55813**

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ಕುಡುಕರಿಗೆ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ಮೊ : 8133933804

**WANTED**
DELIVARY BOYS
CUM AUTO DRIVER
CONTACT
Sri NANJUNDESHWARA AGENCIES
M.G.ROAD, DAVANAGERE
**08192 255086**

**ಬೇಕಾಗಿದ್ದಾರೆ**
ಫರ್ನಿಚರ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಮತ್ತು ಸೇಲ್ಸ್ ಮ್ಯಾನೇಜರ್ ಬೇಕಾಗಿದ್ದಾರೆ. ದಾವಣಗೆರೆ ನಗರದವರಿಗೆ ಆದ್ಯತೆ, ನೇರವಾಗಿ ಭೇಟಿ ಮಾಡಿ.
ಕಬ್ಬೂರ್ ಫರ್ನೀಚರ್ಸ್
ನರಸರಾಜ ರಸ್ತೆ, ಹಳೇ ಸಿರಿಗೆರೆ ಹಾಸ್ಟೆಲ್ ಬಿಲ್ಡಿಂಗ್, ದಾವಣಗೆರೆ-1
98443 10140, 98444 26300

**ದಾನಿಶ್ ಅಕ್ವೇರಿಯಮ್**
ದಾನಿಶ್ ಅಕ್ವೇರಿಯಮ್ ಎಂಬ ಮೂರು ಶಾಖೆಗಳಾದ KTG ನಗರ, ಸರಸ್ವತಿ ಬಡಾವಣೆ, ಜಯನಗರ ದಾವಣಗೆರೆಯಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
98453 70694, 97318 47601

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ಸೇಲ್ಸ್ ಮ್ಯಾನ್ ಕೆಲಸಕ್ಕೆ ಬೇಕಾಗಿದ್ದಾರೆ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ
**94823 73289**

**70%ವರೆಗೆ ಬಿಗ್ ಸೇಲ್**
ದಾವಣಗೆರೆ ಹದಡಿ ರಸ್ತೆಯಲ್ಲಿರುವ ಉದಯ ಸೂಪರ್ ಬಜಾರ್ ನಲ್ಲಿ ವಿವಿಧ ಬ್ರಾಂಡ್ ಗಳ ಶೂಗಳು, ಜೀನ್ಸ್ ಮತ್ತಿತರೆ ಉಡುಪುಗಳು 70% ವರೆಗೆ ಡಿಸ್ಕೌಂಟ್ ನಲ್ಲಿ ದೊರೆಯುತ್ತವೆ.
ಸಂಪರ್ಕಿಸಿ: 90198 59823

**JOBS**
Sales Manager/Executives
Any Degree (English, Computer Knowledge)
Office Job/Marketing/Field Work, Male/Female
Freshers/Experienced
**98444 92888**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


## ಸಾಧನಗಳು ನಿಮ್ಮಲ್ಲಿಯೇ ಇವೆ

**(1ನೇ ಪುಟದಿಂದ)** ಕಾರಣಕ್ಕೆ ಕೆಲವರನ್ನು ಗುಡಿ ಒಳಗೆ ಬಿಡುತ್ತಿರಲಿಲ್ಲ. ಬಸವಣ್ಣ ಇಂತಹ ಕರ್ಮಠತನದ ವಿರೋಧಿಯಾಗಿದ್ದರು. ಅವರೇ ಕೂಡಲಸಂಗನ ಅರ್ಚನೆ ಮಾಡಿದ್ದರು ಎಂದು ಶ್ರೀ ಗಳು ಹೇಳಿದರು.

ದೇವಾಂಗ ಜಗದ್ಗುರು ಶ್ರೀ ದಯಾನಂದಪುರಿ ಮಹಾಸ್ವಾಮೀಜಿ ಮಾತನಾಡುತ್ತಾ ಹೋಮ, ಹವನಗಳಿಂದ ರೋಗ ನಿರೋಧಕ ಶಕ್ತಿ ಹೆಚ್ಚಲಿದೆ. ದೇವಸ್ಥಾನಗಳು ಸಂಸ್ಕೃತಿ, ಸಂಸ್ಕಾರಗಳನ್ನು ಕಲಿಸುತ್ತವೆ. ಈ ವ್ಯವಸ್ಥೆ ಹಿಂದೂ ಧರ್ಮದಲ್ಲಿ ಮಾತ್ರ ಸಾಧ್ಯ. ಇದರಿಂದ ಮನುಷ್ಯನ ಬದುಕು ಬಂಗಾರವಾಗಲಿದೆ. ಕೋಟ್ಯಾಂತರ ಹಣ ಖರ್ಚು ಮಾಡಿ ನಿರ್ಮಿಸುವ ಈ ಗುಡಿಗಳ ಸ್ವಚ್ಛತೆ ಕಾಪಾಡುವ ಹೊಣೆಗಾರಿಕೆಯನ್ನು ಮಹಿಳೆಯರು ವಹಿಸಿಕೊಳ್ಳಬೇಕು ಎಂದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ಅಧ್ಯಕ್ಷ ಎಂ.ಡಿ ಲಕ್ಷ್ಮಿನಾರಾಯಣ ಮಾತನಾಡಿ, ಆಶೀರ್ವಾದ ಪಡೆಯಲು ಗುರುಗಳಿದ್ದರೆ, ಗುರಿ ತಲುಪಲು ತಾಯಿ ಬನಶಂಕರಿ ಇದ್ದಾಳೆ. ಹಾಗಾಗಿ ಇಲ್ಲಿನ ಜನರ ಬದುಕು ಸಮೃದ್ಧಗೊಳ್ಳಲಿದೆ ಎಂದರು.

ವಾಸ್ತು ಶಿಲ್ಪಿ ರುದ್ರಪ್ಪ ಕಮ್ಮಾರ, ಶಾಸಕ ಆರ್. ಶಂಕರ್, ಜಿಪಂ ಮಾಜಿ ಸದಸ್ಯೆ ಮಂಗಳಗೌರಿ ಪೂಜಾರ, ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಡಾ: ಬಸವರಾಜ ಕೇಲಗಾರ, ನಗರಸಭೆ ಮಾಜಿ ಅಧ್ಯಕ್ಷ ಬಸವರಾಜ ಲಕ್ಮೇಶ್ವರ, ಜಿಲ್ಲಾ ದೇವಾಂಗ ಸಮಾಜದ ಅಧ್ಯಕ್ಷ ಸಂಕಪ್ಪ ಮಾರನಾಳ, ಸಾಧು ವೀರಶೈವ ಸಮಾಜದ ಅಧ್ಯಕ್ಷ ಶಿವಪ್ಪ ನಂದಿಹಳ್ಳಿ ಮತ್ತಿತರರಿದ್ದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಪ್ರಾಸ್ತಾವಿಕ ಮಾತುಗಳನ್ನಾಡಿ, ಸ್ವಾಗತಿಸಿದರು. ದಾನಿಗಳಿಗೆ, ಸಹಾಯ ಸಹಕಾರ ನೀಡಿದವರಿಗೆ ಶ್ರೀ ಗಳು ಗೌರವಿಸಿದರು.

## ಮೀಸಲಾತಿಗೆ ಗಡುವು ಕೊಟ್ಟಿಲ್ಲ

**(1ನೇ ಪುಟದಿಂದ)** ಮಾಡುತ್ತೇವೆ ಎಂದವರು ಹೇಳಿದ್ದಾರೆ.

ಸಮಾಜದ ಮುಖಂಡರ ಸಭೆಯಲ್ಲಿ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ಸಚಿವರಾದ ಶಂಕರ್ ಪಾಟೀಲ ಮುನೇನಕೊಪ್ಪ, ಸಿ.ಸಿ. ಪಾಟೀಲ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಸಿದ್ದು ಸವದಿ, ಅರವಿಂದ ಬೆಲ್ಲದ ಮತ್ತಿತರರು ಉಪಸ್ಥಿತರಿದ್ದರು.

## ವಾಹನ ಡಿಕ್ಕಿ : ವಿದ್ಯಾರ್ಥಿನಿ ಸಾವು



**(1ನೇ ಪುಟದಿಂದ)** ಬಡಿದ ಪರಿಣಾಮ ಭಾರೀ ಏಟು ಬಿದ್ದು ತೀವ್ರ ರಕ್ತಸ್ರಾವವಾಗಿದೆ. ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾಳೆ. ಯುವತಿ ತಲೆಗೆ ಹೆಲ್ಮೆಟ್ ಧರಿಸಿದ್ದರಾದರೂ, ಅದು ಅರ್ಧ ಹೆಲ್ಮೆಟ್, ಅದರಲ್ಲೂ ಸುರಕ್ಷಿತವಾಗಿರಲಿಲ್ಲ ಎಂದು ಹೇಳಲಾಗುತ್ತಿದ್ದು, ಸುರಕ್ಷಿತವಾದ ಹೆಲ್ಮೆಟ್ ಧರಿಸಿದ್ದರೆ ಅಪಘಾತದಿಂದ ಜೀವವಾದರೂ ಉಳಿಯುತ್ತಿತ್ತು ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬಂದವು.

## ಪಾಲಿಕೆ ಆಡಳಿತ ವಿಫಲ

**(1ನೇ ಪುಟದಿಂದ)** ಹಾಗೂ ಸಿಬ್ಬಂದಿಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದು, ಕಳೆದ ಎರಡು ತಿಂಗಳಿನಿಂದ ಪಾಲಿಕೆಯಲ್ಲಿ ಯಾವುದೇ ಕೆಲಸಗಳು ನಡೆಯುತ್ತಿಲ್ಲ. 1 ಖಾತೆ ಎಕ್ಸ್‌ಟ್ರಾಕ್ಟ್ ಕೊಡಲು 2 ತಿಂಗಳು ಸತಾಯಿಸುತ್ತಿದ್ದಾರೆ. ಕಂದಾಯ ವಿಭಾಗದ ಉಪ ಆಯುಕ್ತರು ಸಹಿ ಸಾಕಾಗಿದ್ದರೂ, ಆಯುಕ್ತರೇ ಸಹಿ ಮಾಡಲಾರಂಭಿಸಿದ್ದಾರೆ ಇದರಿಂದಾಗಿ ವಿಳಂಬವಾಗುತ್ತಿದೆ ಎಂದು ಆರೋಪಿಸಿದರು.

ಕಳೆದ ಮೇಯರ್ ಅವಧಿಯ 'ಮುಂದುವರೆದ ಸಾಮಾನ್ಯ ಸಭೆ' ಹಾಗೂ ಸೆ.8ರಂದು ಒಂದು ಸಾಮಾನ್ಯ ಸಭೆ ಹೊರತುಪಡಿಸಿದರೆ ಇಲ್ಲಿಯವರೆಗೆ ಒಂದೂ ಸಭೆಯಾಗಿಲ್ಲ. ಪ್ರತಿ ತಿಂಗಳು ಸಭೆ ನಡೆಸಬೇಕೆಂದು ಸರ್ಕಾರ ಸುತ್ತೋಲೆ ಹೊರಡಿಸಿದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ. ಕಳೆದ ಸಾಮಾನ್ಯ ಸಭೆಯ ನಡವಳಿಗಳನ್ನು 7 ದಿನಗಳೊಳಗಾಗಿ ನೀಡಬೇಕಿತ್ತು. ಆದರೆ ನಾಲ್ಕು ತಿಂಗಳಾದರೂ ತಯಾರಿಸಿಲ್ಲ ಎಂದ ಅವರು, ಸಭೆ ಕರೆದರೆ ವಾರ್ಡ್‌ಗಳ ಸಮಸ್ಯೆಗಳು, ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಎವಿಕೆ ಕಾಲೇಜು ರಸ್ತೆಯಲ್ಲಿ ಅಳವಡಿಸಲಾಗಿದ್ದ ಅತ್ಯಾಧುನಿಕ ವಿದ್ಯುತ್ ದೀಪಗಳು ಕೆಟ್ಟು ಹೋಗಿದ್ದು, ಕೇಳಿದರೆ ಅವುಗಳನ್ನು ಪಾಲಿಕೆಗೆ ಹಸ್ತಾಂತರಿಸಿಲ್ಲ ಎಂದು ಹೇಳಲಾಗುತ್ತಿದೆ. ಕಸ ಸಂಗ್ರಹಣೆ ಕೆಲಸವನ್ನು ಯಾವುದೇ ಡಿಪಾಸಿಟ್ ಕಟ್ಟಿಸಿಕೊಳ್ಳದೆ ಪಕ್ಷದ ಕಾರ್ಯಕರ್ತರಿಗೆ ಕೊಡಲಾಗಿದೆ. ವಾಣಿಜ್ಯ ಮಳಿಗೆಗಳಿಂದ ಅವರು 300-400 ಹಾಗೂ ಮದುವೆ ಮಂಟಪಗಳಲ್ಲಿ ಸುಮಾರು 2 ಸಾವಿರ ರೂ. ವಸೂಲಿ ಮಾಡುವ ಮೂಲಕ ಲೂಟಿ ಕಾರ್ಯ ನಡೆಯುತ್ತಿದೆ. ಕಟ್ಟಡ ಕಟ್ಟಲು ಎನ್‌ಒಸಿ ಕೊಡುವ ಕೆಲಸ ಪಾಲಿಕೆಯಲ್ಲಿ ಒಂದು ದಂಧೆಯಾಗಿ ಮಾರ್ಪಟ್ಟಿದೆ ಎಂದರು.

ವರ್ಕ್ ಆರ್ಡರ್ ಕೊಡಲು ಒಂದು ಪರ್ಸೆಂಟ್ ಗುತ್ತಿಗೆದಾರರಿಂದ ಹಣ ಕೇಳುತ್ತಿದ್ದಾರೆ ಎಂದು ಗುತ್ತಿಗೆದಾರರೇ ನಮ್ಮ ಬಳಿ ಬಂದು ಆರೋಪಿಸುತ್ತಿದ್ದಾರೆ. ಈ ಬಗ್ಗೆ ಲೋಕಾಯುಕ್ತರಿಗೂ ದೂರು ಸಲ್ಲಿಸಲಿದ್ದೇವೆ ಎಂದರು. 9 ಜನ ಸಹಾಯಕ ಎಂಜಿನಿಯರ್‌ಗಳು ನೇಮಕಗೊಂಡು 9 ತಿಂಗಳುಗಳಾದರೂ ಅವರಿಗೆ ಕೆಲಸ ಹಂಚಿಕೆ ಮಾಡಿಲ್ಲ ಎಂದರು. ನಾಮಫಲಕದಲ್ಲಿ ಕನ್ನಡ ಇದ್ದರೂ ಕೆಲವು ಕಡೆ ಬದಲಿಸಬೇಕೆಂದು, ಇಲ್ಲವಾದರೆ ದಂಡ ವಿಧಿಸುವುದಾಗಿ ಮೇಯರ್ ಹೇಳಿದ್ದಾರೆ. ಕೊರೊನಾ ಸಂಕಷ್ಟದಲ್ಲಿ ವ್ಯಾಪಾರವೇ ಕಷ್ಟ. ಇಂತಹ ವೇಳೆ ನಾಮಫಲಕ ಬದಲಿಸುವುದು ಹೊರೆಯಾಗುತ್ತದೆ ಎಂದು ಪಾಲಿಕೆ ಸದಸ್ಯ ಮಂಜುನಾಥ ಗಡಿಗುಡಾಳ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯ ಕೆ.ಚಮನ್ ಸಾಬ್, ಸೈಯದ್ ಚಾರ್ಲಿ, ಗಣೇಶ್ ಹುಲ್ಮನಿ, ಮುಖಂಡ ಯುವರಾಜ್ ಉಪಸ್ಥಿತರಿದ್ದರು.


**ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿ**
**ಡಿ.ಬಿ. ಶಂಕರಮೂರ್ತಿ ನಿಧನ**



ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀ ಡಿ.ಬಿ. ಶಂಕರಮೂರ್ತಿ ಅವರು ದಿನಾಂಕ 16.12.2021ರ ಗುರುವಾರ ಬೆಳಿಗ್ಗೆ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಶ್ರೀ ಮಾಚಿದೇವ ಕಲ್ಯಾಣ ಮಂಟಪದ ಹಿಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ ಇಲ್ಲಿರುವ ಅವರ ಸ್ವಗೃಹದಲ್ಲಿ ಇರಿಸಲಾಗಿದ್ದು, ದಿನಾಂಕ 17.12.2021ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಗ್ಲಾಸ್ ಹೌಸ್ ಬಳಿಯ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.
-ದುಃಖತಪ್ತ ಕುಟುಂಬ ವರ್ಗ
ಮೊ. 95917-62569, 98866-53398

**ಎನ್. ನಾಗರಾಜಪ್ಪ ನಿಧನ**




ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, #775/43, A3 ರ ವಾಸಿ ದಿ॥ ನಿಂಗಪ್ಪ ನಿರ್ವಾಣಪ್ಪ ಇವರ ಮಗ
**ಎನ್. ನಾಗರಾಜಪ್ಪ** (ಜನನ : 1952)
ಇವರು ದಿನಾಂಕ : 16.12.2021ರ ಮಧ್ಯಾಹ್ನ 1.45ಕ್ಕೆ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಧರ್ಮಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.12.2021ರ ಶುಕ್ರವಾರ ಬೆ.11.30ಕ್ಕೆ ಮೃತರ ಸ್ವಗ್ರಾಮವಾದ ಹಿರೇಗಂಗೂರಿನ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತ ಕುಟುಂಬ ವರ್ಗ :
ಫೋನ್ : 99642 61990, 84537 64004, 94827 96273

**ಕಕ್ಕರಗೊಳ್ಳದ ಗೌಡಪ್ಪರ ಜಿ.ಎಲ್.ಶುಭಾ ನಿಧನ**



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಗೌಡಪ್ಪ ನಾಗಪ್ಪರ ಮಗ ಜಿ.ಎನ್ ಲೋಕೇಶ್ ಅವರ ಪುತ್ರಿ ಕು॥ ಜಿ.ಎಲ್. ಶುಭಾ (23) ಅವರು ದಿನಾಂಕ 16.12.2021ರ ಗುರುವಾರ ರಾತ್ರಿ 9 ಕ್ಕೆ ನಿಧನರಾದರು. ತಂದೆ, ತಾಯಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.12.2021ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕಕ್ಕರಗೊಳ್ಳ ಗ್ರಾಮದಲ್ಲಿ ನೆರವೇರಲಿದೆ.

**ಬಸಾಪುರದ ಗೌಡ್ರ ಕರಿಬಸಯ್ಯ ನಿಧನ**



ದಾವಣಗೆರೆ ಸಿಟಿ, 21 ನೇ ವಾರ್ಡ್ ಬಸಾಪುರ ವಾಸಿ ಗೌಡ್ರ ಮಹಾಂತಯ್ಯ ಅವರ ಪುತ್ರ ಗೌಡ್ರ ಕರಿಬಸಯ್ಯ (68) ಅವರು ದಿನಾಂಕ 16.12.2021 ನೇ ಗುರುವಾರ ರಾತ್ರಿ 9.30 ಕ್ಕೆ ನಿಧನರಾದರು. ಪುತ್ರಿ, ಇಬ್ಬರು ಸಹೋದರರು, ಮೂವರು ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.12.2021 ನೇ ಶುಕ್ರವಾರ ಮಧ್ಯಾಹ್ನ 12 ಕ್ಕೆ ಸ್ವಗ್ರಾಮ ಬಸಾಪುರದ ರುದ್ರಭೂಮಿಯಲ್ಲಿ ನೆರವೇರಲಿದೆ.


## ಹರಿಹರದಲ್ಲಿ ಭತ್ತ ಮಾರಿದ ಹಣಕ್ಕಾಗಿ ರೈತರ ಪ್ರತಿಭಟನೆ



**(1ನೇ ಪುಟದಿಂದ)** ಖರೀದಿ ಮಾಡುವಾಗ ಹಣವನ್ನು ನೀಡುವುದಕ್ಕೆ ಒಂದು ವಾರ ಸಮಯವನ್ನು ಕೇಳಿದ್ದರು. ಆದರೆ ಭತ್ತವನ್ನು ಖರೀದಿ ಮಾಡಿಕೊಂಡು ಹೋದ ನಂತರದಲ್ಲಿ ಒಂದು ತಿಂಗಳು ಕಳೆದರೂ ಸಹ ರೈತರಿಗೆ ಹಣವನ್ನು ಕೊಟ್ಟಿರುವುದಿಲ್ಲ ಎಂದಿದ್ದಾರೆ. ದೋಸ್ತಾನ ಸಾಮಿಲ್ ನಲ್ಲಿ ಇರುವ ಭತ್ತವನ್ನು ನಮಗೆ ವಾಪಸ್ ಕೊಟ್ಟರೆ ನಾವುಗಳು ಬೇರೆ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತೇವೆ. ಇದಕ್ಕು ಅವಕಾಶ ಕೊಡುತ್ತಿಲ್ಲ. ಹೀಗಾಗಿ ಹಣ ಬರುವವರೆಗೂ ಇಲ್ಲಿಂದ ಕದಲುವುದಿಲ್ಲ ಎಂದು ರೈತರು ಹೇಳಿದರು.

ಪ್ರಶಾಂತ್ ಸ್ವಾಮಿ ಅವರನ್ನು ಸಂಪರ್ಕಿಸಿದಾಗ, ಭತ್ತದ ಬೆಲೆ ಬಾರದೇ ಇರುವುದರಿಂದ ಸಮಸ್ಯೆಯಾಗಿದೆ. ಈ ವಿಷಯ ನ್ಯಾಯಾಲಯದಲ್ಲಿದ್ದು, ನ್ಯಾಯಾಲಯವು ರೈತರಿಗೆ ಹಣ ಹಿಂತಿರುಗಿಸಲು 45 ದಿನಗಳ ಸಮಯವನ್ನು ನೀಡಿದೆ. ಈ ಅವಧಿಯಲ್ಲಿ ಹಣ ನೀಡುತ್ತೇನೆ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ರಾಮನ ಗೌಡ, ಹನುಮಂತಗೌಡ ಹೆಚ್. ನಿಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಹರಪನಹಳ್ಳಿ ವಕೀಲರ ಸಂಘಕ್ಕೆ ಜಗದಪ್ಪ ಅಧ್ಯಕ್ಷ



ಹರಪನಹಳ್ಳಿ,ಡಿ.16- ಸ್ಥಳೀಯ ನ್ಯಾಯವಾದಿಗಳ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಕೆ.ಜಗದಪ್ಪ, ಉಪಾಧ್ಯಕ್ಷರಾಗಿ ಡಿ.ಬಿ. ವಾಸುದೇವ, ಕಾರ್ಯದರ್ಶಿ ಎಸ್.ಜಿ. ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿಯಾಗಿ ನಾಗೇಂದ್ರಪ್ಪ ಎಂ., ಖಜಾಂಚಿಯಾಗಿ ವಿ.ಹೂಲೆಪ್ಪ ಆಯ್ಕೆಯಾಗಿದ್ದಾರೆ ಎಂದು ವಕೀಲರ ಸಂಘದ ಚುನಾವಣಾಧಿಕಾರಿ ರಾಮನಗೌಡ ಪಾಟೀಲ್ ಮತ್ತು ಬಿ. ಹಾಲೇಶ್ ತಿಳಿಸಿದ್ದಾರೆ.

ಬಿ.ರೇವಣಗೌಡ, ಎಚ್. ಮಲ್ಲಿಕಾರ್ಜುನ, ಕೆ. ಆನಂದ, ಸಿರಾಜ್, ವಿ.ವಾಸುದೇವನಾಯ್ಕ, ಎನ್. ನಂದೀಶ್‌ನಾಯ್ಕ, ಎಸ್.ಜಾಕೀರ್ ಹುಸೇನ್, ಎಸ್. ತಿಪ್ಪೇಸ್ವಾಮಿ, ಜಿ.ಮದ್ದಾನಪ್ಪ, ಬಿ.ಬಸವನಗೌಡ, ಆನಂದಪ್ಪ, ಎಂ.ಮಲ್ಲಪ್ಪ, ಸುರೇಶ, ಕೆಂಗಳ್ಳಿ ಪ್ರಕಾಶ, ನಜೀರ್, ಎಂ. ಸುರೇಶ, ಮಂಜುನಾಥ , ಜಿಟ್ಟಿನಕಟ್ಟಿ ನಾಗರಾಜನಾಯ್ಕ, ವಾಮದೇವ, ಪುಣಭಗಟ್ಟಿ ನಿಂಗಪ್ಪ, ಬೇಲೂರು ಸಿದ್ದೇಶ, ತಿಪ್ಪೇಶ್, ಗುಡದಯ್ಯ, ಡಿ. ಹನುಮಂತಪ್ಪ, ಮಂಜುನಾಥ್, ಮೃತ್ಯುಂಜಯ, ಜಾಕೀರ್, ಎ.ಎಲ್.ರೇವಣಸಿದ್ದಪ್ಪ, ಬಿ.ತಿರುಪತಿ, ಸಿ. ಹನುಮಂತಪ್ಪ, ಅಹಮದ್, ಕೆ.ದ್ರಾಕ್ಷಾಯಣಮ್ಮ, ರೇಣುಕಾ ಮೇಟಿ, ಮಲ್ಲಮ್ಮ ಇತರರು ಆಯ್ಕೆ ಸಂದರ್ಭದಲ್ಲಿ ಇದ್ದರು.

# ಆವರಗೊಳ್ಳದಲ್ಲಿ ಧನುರ್ಮಾಸ ಪೂಜಾನುಷ್ಠಾನ ಪ್ರಾರಂಭ



ದಾವಣಗೆರೆ, ಡಿ. 16- ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಲೋಕ ಕಲ್ಯಾಣಕ್ಕಾಗಿ ಧನುರ್ಮಾಸ ಪೂಜಾನುಷ್ಠಾನವು ಇಂದಿನಿಂದ ಜನವರಿ 15ರವರೆಗಿನ ಒಂದು ತಿಂಗಳ ಪರ್ಯಂತ ನಡೆಯಲಿದೆ.

**ಪುಣ್ಯ ಸ್ಮರಣೋತ್ಸವ:** ಬರುವ ಜನವರಿ 3 ರ ಸೋಮವಾರ ಆವರಗೊಳ್ಳ ಶ್ರೀ ಕ್ಷೇತ್ರದಲ್ಲಿ ಶ್ರೀ ರಂಭಾಪುರಿ ಜಗದ್ಗುರು ಲಿಂ. ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳ ಪುಣ್ಯ ಸ್ಮರಣೋತ್ಸವ, ಶ್ರೀ ವಿಷಮರ್ಧನ ಸಂಜೀವಿನಿ ಗದ್ದುಗೆಯ 49 ನೇ ವಾರ್ಷಿಕೋತ್ಸವದ ಅಂಗವಾಗಿ ಶಿವದೀಕ್ಷೆ, ಕಾರ್ತಿಕ ಜರುಗಲಿದೆ.

# ಜಿಲ್ಲೆಯಲ್ಲಿ ನಾಳೆ ಬೃಹತ್ ಲೋಕ್ ಅದಾಲತ್

## ವ್ಯಾಜ್ಯ ಪೂರ್ವ ಪ್ರಕರಣಗಳ ರಾಜೀಗೂ ಅವಕಾಶ : ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ

ದಾವಣಗೆರೆ, ಡಿ. 16 - ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ ಹಾಗೂ ಜಗಳೂರು ನ್ಯಾಯಾಲಯಗಳ ಆವರಣದಲ್ಲಿ ನಾಡಿದ್ದು ದಿನಾಂಕ 18 ರ ಶನಿವಾರ ಮೆಗಾ ಲೋಕ್ ಅದಾಲತ್ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಿಯಾಗಬಹುದಾದ ವಿವಿಧ ಪ್ರಕರಣಗಳ ಜೊತೆಗೆ, ವ್ಯಾಜ್ಯ ಪೂರ್ವ ಪ್ರಕರಣಗಳನ್ನೂ ಕೂಡ ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಎಂದರು.

ಸುಮಾರು 5 ಸಾವಿರ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸುವ ಗುರಿ ಇದೆ. ರಾಜಿಗೆ ಅರ್ಹವಾದ 1500 ಕ್ರಿಮಿನಲ್, ಚೆಕ್ ಬೌನ್ಸ್‌ನ 800, ಪರಿಹಾರ ಹಣದ 300 ಪ್ರಕರಣ ಗಳನ್ನು ಗುರುತಿಸಲಾಗಿದೆ ಎಂದವರು ತಿಳಿಸಿದರು.

ನ್ಯಾಯಾಲಯಕ್ಕೆ ದಾಖಲಾಗುವ ಮುನ್ನವೇ ವ್ಯಾಜ್ಯಪೂರ್ವ ಪ್ರಕರಣಗಳನ್ನೂ ಕೂಡ ಲೋಕ್ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲು ಅವಕಾಶ ಒದಗಿಸಲಾಗಿದೆ. ಕಡಿಮೆ ಸಮಯದಲ್ಲಿ ಹಾಗೂ ವೆಚ್ಚ ರಹಿತವಾಗಿ ವ್ಯಾಜ್ಯ ಇತ್ಯರ್ಥಕ್ಕೆ ಲೋಕ್ ಅದಾಲತ್ ಸಹಕಾರಿ ಎಂದು ನ್ಯಾಯಮೂರ್ತಿ ಹೆಗಡೆ ತಿಳಿಸಿದರು.

ಜಿಲ್ಲೆಯಲ್ಲಿ ಪ್ರಸ್ತುತ 32,738 ಪ್ರಕರಣಗಳು ಬಾಕಿ ಇದ್ದು, ಈ ಪೈಕಿ ಸುಮಾರು 18 ಸಾವಿರ ಸಿವಿಲ್ ಪ್ರಕರಣಗಳಿವೆ ಎಂದ ಅವರು, ಕಳೆದ ಸೆಪ್ಟೆಂಬರ್ 30 ರಂದು ನಡೆಸಲಾದ ಮೆಗಾ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯಲ್ಲಿ ಒಟ್ಟು 2,909 ಪ್ರಕರಣಗಳು ಇತ್ಯರ್ಥಗೊಂಡು, 7.67 ಕೋಟಿ ರೂ. ಗಳ ಪರಿಹಾರ ಒದಗಿಸಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕಕ್ಷಿಗಾರರು ಭೌತಿಕವಾಗಿ ಅಥವಾ ವಿಡಿಯೋ ಕಾನ್ಫರೆನ್ಸ್ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪ್ರಕರಣಗಳನ್ನು ಲೋಕ್ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಎಂದೂ ಅವರು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಮಾತನಾಡಿ, ಲೋಕ್ ಅದಾಲತ್ ಕುರಿತ ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ದಾವಣಗೆರೆ ಇವರನ್ನು ದೂ.:08192-296364, ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ 08192-296885, ಹೊನ್ನಾಳಿ 08188-251732, ಚನ್ನಗಿರಿ 08189-229195 ಮತ್ತು ಜಗಳೂರು 08196-227600 ಅವರನ್ನು ಸಂಪರ್ಕಿಸಬಹುದು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಲೋಕಿಕೆರೆ ಪ್ರದೀಪ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ. ರಾಜೀವ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ರಾಜೀಯಾಗಬಹುದಾದ ಪ್ರಕರಣಗಳಿವು...

**ರಾಜಿಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳೂ, ಎಂ.ಎಂ.ಡಿ.ಆರ್ ಕಾಯ್ದೆಯಡಿಯ ಪ್ರಕರಣಗಳನ್ನು ಮೆಗಾ ಲೋಕ್ ಅದಾಲತ್ ನಲ್ಲಿ ಪರಿಹರಿಸಿಕೊಳ್ಳಬಹುದು ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದ್ದಾರೆ.**

**ರಾಜಿಯಾಗಬಹುದಾದ ಅಕ್ರಮ ಮರಳುಗಾರಿಕೆಯ ಪ್ರಕರಣಗಳು, ವಿಮೆಗೆ ಸಂಬಂಧಪಟ್ಟ ಪ್ರಕರಣಗಳನ್ನೂ ಕೂಡ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ವೈವಾಹಿಕ ಕುಟುಂಬ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನ ಹೊರತುಪಡಿಸಿ), ಪಿಂಚಣಿ ಪ್ರಕರಣಗಳು, ವೇತನ ಭತ್ಯೆಗೆ ಸಂಬಂಧಿಸಿದ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕ, ಕೈಗಾರಿಕೆ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳ ಬಹುದು. ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯದ ಸಂಪೂರ್ಣ ಶುಲ್ಕವನ್ನು ಮರುಪಾವತಿ ಮಾಡಲಾಗುವುದು.**

# ಹರಿಹರದಲ್ಲಿ ನಾಳಿನ ಲೋಕ್ ಅದಾಲತ್‌ನಲ್ಲಿ ರಾಜೀಗೆ ವಕೀಲರ ಶ್ರಮ

ಹರಿಹರ, ಡಿ. 16 – ನಾಡಿದ್ದು ದಿನಾಂಕ 18 ರ ಶನಿವಾರ ನಡೆಯಲಿರುವ ಮೆಗಾ ಲೋಕ್ ಅದಾಲತ್‌ನಲ್ಲಿ ಕಕ್ಷಿದಾರರ ಅನುಮತಿಯೊಂದಿಗೆ ಹೆಚ್ಚಿನ ಪ್ರಕರಣಗಳನ್ನು ರಾಜೀ ಮಾಡಿಸುವಲ್ಲಿ ಎಲ್ಲಾ ವಕೀಲರು ಶ್ರಮಿಸಲಿದ್ದಾರೆ ಎಂದು ವಕೀಲರ ಸಂಘದ ಅಧ್ಯಕ್ಷ ಪಿ. ರುದ್ರಗೌಡ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಡಿಯಲ್ಲಿ ರಾಜ್ಯಾದ್ಯಂತ ಬೃಹತ್ ಲೋಕ್ ಅದಾಲತ್ ಅನ್ನು ಹಮ್ಮಿಕೊಂಡಿರುವ ಹಿನ್ನಲೆಯಲ್ಲಿ ನಗರ ಕೆಹೆಚ್‌ಬಿ ಕಾಲೋನಿಯ ನ್ಯಾಯಾಲಯ ಸಂಕೀರ್ಣದಲ್ಲಿ ಬೃಹತ್ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದವರು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಗಣೇಶ್ ದುರ್ಗದ್, ಸಹಕಾರ್ಯದರ್ಶಿ ಬಾಲಾಜಿ ಸಿಂಗ್, ಬಿ.ನಾಗರಾಜ್, ಬಿ.ಸಿ.ಪ್ರಕಾಶ್, ಉಮೇಶ್ ಹುಲ್ಮನಿ, ಶಂಕರ್ ಮತ್ತಿತರರು ಉಪಸ್ಥಿತರಿದ್ದರು.

# ಹೊನ್ನಾಳಿ - ನ್ಯಾಮತಿ ತಾ.ಗೆ ಎಸಿಬಿ

ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಉಪಾಧೀಕ್ಷಕರು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಹೊನ್ನಾಳಿ ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಹಾಗೂ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ನ್ಯಾಮತಿ ತಾಲ್ಲೂಕು ಕಚೇರಿಗೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದು - ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ದೂರವಾಣಿ : 08192-236600, 94808 06227, 94808 06284 ಅನ್ನು ಸಂಪರ್ಕಿಸಬಹುದು.

# ಹರಿಹರ : ಷಹಜಾದ್ ನಾಮಪತ್ರ ಸಲ್ಲಿಕೆ

ಹರಿಹರ, ಡಿ. 16- ನಗರದ 21ನೇ ವಾರ್ಡ್‌ನ ಉಪಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಎಸ್.ಕೆ. ಷಹಜಾದ್ ಸನಾವುಲ್ಲಾ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ 66 ನಾಮಪತ್ರ ಸಲ್ಲಿಕೆ

ಮಲೇಬೆನ್ನೂರು, ಡಿ. 16- ಇಲ್ಲಿನ ಪುರಸಭೆಯ ಎಲ್ಲಾ 23 ವಾರ್ಡ್‌ಗಳಿಗೆ ನಡೆಯುವ ಚುನಾವಣೆಗೆ ಸಲ್ಲಿಸಿದ್ದ ನಾಮಪತ್ರಗಳ ಪರಿಶೀಲನೆ ಇಂದು ನಡೆಯಿತು.


ಒಟ್ಟು 68 ನಾಮಪತ್ರಗಳ ಪೈಕಿ 66 ನಾಮಪತ್ರಗಳು ಕ್ರಮಬದ್ಧವಾಗಿದ್ದು, 2 ನಾಮ ಪತ್ರಗಳ ಪರಿಶೀಲನೆ ಕುರಿತು ಚುನಾವಣಾ ಆಯೋಗಕ್ಕೆ. ಸ್ಪಷ್ಟೀಕರಣ ಕೇಳಲಾಗಿದೆ ಎಂದು ಹೇಳಲಾಗಿದೆ.

22 ಕಾಂಗ್ರೆಸ್, 21 ಜೆಡಿಎಸ್, 14 ಬಿಜೆಪಿ ಮತ್ತು 1 ಎಸ್ ಡಿ ಪಿಐ ಹಾಗೂ 10 ಜನ ಪಕ್ಷೇತರ ಅಭ್ಯರ್ಥಿಗಳು ನಾಮ ಪತ್ರ ಸಲ್ಲಿಸಿದರು. ವಾರ್ಡ್ ನಂ.1 ರಲ್ಲಿ ಜೆಡಿಎಸ್ ಅಭ್ಯರ್ಥಿಗಳಾಗಿ ಅಬ್ದುಲ್ ಹಮೀದ್ ಸಾಬ್ ಮತ್ತು ಮಹಮ್ಮದ್ ಷಹಬಾಜ್ ಅಲಿ ಅವರು ಪ್ರತ್ಯೇಕವಾಗಿ ಸಲ್ಲಿಸಿದ್ದ ನಾಮ ಪತ್ರಗಳಿಗೆ ಒಂದೇ ಬಿ, ಫಾರಂ ನೀಡಿದ್ದು, ಆ ಬಿ. ಫಾರಂನಲ್ಲಿ ಇಬ್ಬರ ಹೆಸರನ್ನು ಬರೆಯಲಾಗಿದೆ. ಈ ಕುರಿತು ಚುನಾವಣಾ ಆಯೋಗಕ್ಕೆ ಸ್ಪಷ್ಟೀಕರಣ ಕೇಳಲಾಗಿದೆ ಎಂದು 1 ರಿಂದ 8ನೇ ವಾರ್ಡ್‌ವರೆಗೆ ಚುನಾವಣಾ ಅಧಿಕಾರಿಯಾಗಿರುವ ರಾಮಕೃಷ್ಣ ತಿಳಿಸಿದರು. ನಾಮಪತ್ರ ವಾಪಸ್ ಪಡೆಯಲು ನಾಡಿದ್ದು ದಿನಾಂಕ 18 ಕೊನೆಯ ದಿನವಾಗಿದ್ದು, ಡಿ.27ಕ್ಕೆ ಚುನಾವಣೆ ನಡೆಯಲಿದೆ.

# ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಗುತ್ತೂರು ಗ್ರಾಮ, ಹಂಸ ಸಾಗರ್ ಕಾಂಪೌಂಡ್, ವಾಟರ್ ವರ್ಕ್ಸ್, ದೊಗ್ಗಳ್ಳಿ, ಎಫ್3 ಕೆಹೆಚ್‌ಬಿ, ಎಫ್9 ಕೈಗಾರಿಕ, ಎಫ್10 ಹರಿಹರ ಟೌನ್, ಎಫ್13 ಸಾರಥಿ, ಎಫ್14 ದೀಟೂರು, ಎಫ್ 15 ಎನ್‌ಜೆವೈ, ಎಫ್16 ಗಂಗನರಸಿ, ಫೀಡರ್‌ಗೆ ಬರುವ ಪ್ರದೇಶಗಳಾದ ಚಿಂತಾಮಣಿ ನಗರ, ಹಳೇ ಹರ್ಲಾಪುರ, ವಾಟರ್ ವರ್ಕ್ಸ್, ಅಮರಾವತಿ ಕಾಲೋನಿ, ಮಜ್ಜಿಗೆ ಲೇಔಟ್, ಆಶ್ರಯ ಕಾಲೋನಿ, ವಿಜಯನಗರ, ಕೆ.ಆರ್. ನಗರ, ಹೊಸ ಹರ್ಲಾಪುರ, ಬಸ್ ಡಿಪೋ ರಸ್ತೆ, ಕಿರ್ಲೋಸ್ಕರ್ ಕಾಲೋನಿ, ಹಳೆ ಪಿ.ಬಿ. ರಸ್ತೆ, ಭರಂಪುರ, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಕೆಎಚ್‌ಬಿ ಕಾಲೋನಿ, ಅಮರಾವತಿ ಗ್ರಾಮ, ಆಂಜನೇಯ ಬಡಾವಣೆ, ಪೊಲೀಸ್ ಕ್ವಾಟ್ರರ್ಸ್, ಕೇಶವ ನಗರ, ರೈಲ್ವೆ ಸ್ಟೇಷನ್, ಬಸ್ ಸ್ಟ್ಯಾಂಡ್, ಪಿ.ಬಿ. ರೋಡ್, ಟಿಪ್ಪು ನಗರ, ಪಟೇಲ್ ಬಡಾವಣೆ ಮತ್ತು ಗ್ರಾಮೀಣ ಪ್ರದೇಶಗಳಾದ ದೊಗ್ಗಳ್ಳಿ, ಗಂಗನರಸಿ, ಗಂಗನರಸಿ ಕ್ಯಾಂಪ್, ಗುತ್ತೂರು ಐ.ಪಿ. ವಲಯ, ದೀಟೂರು, ಪಾಮೇನಹಳ್ಳಿ, ಕರಲಹಳ್ಳಿ ಮಠ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವಿತರಣೆಯಲ್ಲಿ ವ್ಯತ್ಯಯವಾಗಲಿದೆ.

# ನಗರದಲ್ಲಿಂದು ಬನ್ನಿ ಮ ಹಾ ೦ ಕಾ ಳ ಮ್ಮ ಕಾರ್ತಿಕೋತ್ಸವ



ಕೆ . ಬಿ . ಬಡಾವಣೆ 4ನೇ ಕ್ರಾಸ್, ಕೆ.ಟಿ.ಜೆ. ಕಾ ೦ ಪೌ ೦ ಡ್ ನಲ್ಲಿರುವ ಶ್ರೀ ಬ ನ್ನಿ ಮ ಹಾ ೦ ಕಾ ಳ ಮ್ಮ ದೇವಸ್ಥಾನದಲ್ಲಿ ಇಂದು ಸಂಜೆ 7 ಗಂಟೆಗೆ ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿದೆ. ಪ್ರಸಾದ ಸೇವೆ : ವಾಣಿವಿಲಾಸ್ ಶ್ರೀಮತಿ ಎಂ. ಚಂದ್ರಕಾಂತಮ್ಮ, ಎಸ್. ಆರ್ ಮುರಿಗೆಪ್ಪನವರ ಮಕ್ಕಳು.

# 40 ಪರ್ಸೆಂಟ್ ಸರ್ಕಾರದ ವಿರುದ್ಧ ಜಾಥಾ

**(1ನೇ ಪುಟದಿಂದ)** ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಸುವರ್ಣ ಸೌಧದ ಮುಂಬಾಗಿಲು ಬಳಿ ಸುಮಾರು 90 ನಿಮಿಷಗಳ ಕಾಲ ದೊಡ್ಡ ನಾಟಕವೇ ನಡೆಯಿತು. ಮುಖಂಡರ ಮಾತಿಗೆ ಬಗ್ಗದ ಪೊಲೀಸರು ಅವರನ್ನು ಬಿಸಿಲಿನಲ್ಲೇ ನಿಲ್ಲಿಸಿದ್ದರು. ಇದರಿಂದ ರೋಷಗೊಂಡ ಸಿದ್ದರಾಮಯ್ಯ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ಸಂಪರ್ಕಿಸಿ, ಶಾಸಕರು ವಿಧಾನಸಭೆ ಪ್ರವೇಶಿಸಲು ಪೊಲೀಸರು ಅಡ್ಡಿಪಡಿಸುತ್ತಿದ್ದಾರೆ ಎಂದು ದೂರಿದರು.

ಈ ಬೆಳವಣಿಗೆಯ ನಂತರ ಕಾರ್ಯಕರ್ತರನ್ನು ದೂರವಿಟ್ಟು ಶಾಸಕರಿಗೆ ಮಾತ್ರ ಸುವರ್ಣ ಸೌಧ ಪ್ರವೇಶಿಸಲು ಪೊಲೀಸರು ಅವಕಾಶ ಮಾಡಿಕೊಟ್ಟರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಈ ರಾಜ್ಯ ವಿಶ್ವ ಮಟ್ಟದಲ್ಲೇ ಅತಿ ದೊಡ್ಡ ಭ್ರಷ್ಟ ಸರ್ಕಾರ ಎಂದು ಗುತ್ತಿಗೆದಾರರ ಸಂಘದವರೇ ಹೇಳಿದ್ದಾರೆ. ಪ್ರತಿ ಹಂತದಲ್ಲೂ ಈ ಸರ್ಕಾರದಲ್ಲಿ ಲಂಚಾವತಾರ ತಾಂಡವವಾಡುತ್ತಿದೆ. ಇದರಿಂದ ಗುಣಮಟ್ಟದ ಕೆಲಸ ಸಾಧ್ಯವಾಗುತ್ತಿಲ್ಲ ಎಂದು ಗುತ್ತಿಗೆದಾರರೇ ಹೇಳುತ್ತಿದ್ದಾರೆ ಎಂದರು.

ಚುನಾವಣೆ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಯಾವುದೇ ದಾಖಲೆ ಇಲ್ಲದೇ ನಮ್ಮ ಸರ್ಕಾರವನ್ನು 10 % ಸರ್ಕಾರ ಎಂದು ಹೇಳಿದ್ದರು. ಆದರೆ ಈಗ ಅವರ ಸರ್ಕಾರದ ವಿರುದ್ಧ ದಾಖಲೆಗಳೇ ಇವೆ. ಈ ವಿಚಾರವಾಗಿ ತನಿಖೆ ನಡೆಸಿ, ನಾವು ತಪ್ಪು ಮಾಡಿದ್ದರೆ ನಮ್ಮ ಅವಧಿಯಲ್ಲಿನ ಕಾಮಗಾರಿಗಳನ್ನೂ ಸೇರಿಸಿ ತನಿಖೆ ಮಾಡಿ ಎಂದು ಹೇಳುತ್ತಿದ್ದೇವೆ ಎಂದು ಹೇಳಿದರು.

# ಆನಗೋಡಿನಲ್ಲಿ ನಾಳೆ ಕಾರ್ತಿಕ

ದಾವಣಗೆರೆ, ಡಿ.16- ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ನಾಡಿದ್ದು ದಿನಾಂಕ 18 ರ ಶನಿವಾರ ರಾತ್ರಿ10 ಗಂಟೆಗೆ ವಿಶ್ವಬಂಧು ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಕಾರ್ತಿಕ ಮಹೋತ್ಸವ ನಡೆಯಲಿದೆ.

# ನೇಕಾರಿಕೆ ಉತ್ಪನ್ನಗಳಿಗೆ ಸುಸ್ಥಿರ ಮಾರುಕಟ್ಟೆ, ದರ

**(1ನೇ ಪುಟದಿಂದ)** ಅನುಮತಿ ಪಡೆಯುವ ಪ್ರಕ್ರಿಯೆ ಕುರಿತು ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಿ, ನೇಕಾರರ ಕಿರುಕುಳ ತಪ್ಪಿಸಲು ಕ್ರಮ ವಹಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಸೂಚಿಸಿದರು.

ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಆರೋಗ್ಯ ಸೌಲಭ್ಯ ಒದಗಿಸುವ ಬೇಡಿಕೆ ಈಡೇರಿಸಲು ಸಮ್ಮತಿಸಿದ ಮುಖ್ಯಮಂತ್ರಿಯವರು, ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಣೆ ಹಾಗೂ ಬಡ್ಡಿ ಸಹಾಯ ಧನ ನೀಡುವ ಯೋಜನೆಯ ಮೊತ್ತ ಹೆಚ್ಚಿಸುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಲಾಕ್‌ಡೌನ್ ನಂತರ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ನೇಕಾರರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಲು ಸಹ ಮುಖ್ಯಮಂತ್ರಿಗಳು ಸಮ್ಮತಿಸಿದರು.

ಮಹಾರಾಷ್ಟ್ರ ಹಾಗೂ ತಮಿಳು ನಾಡು ರಾಜ್ಯಗಳಲ್ಲಿ ನೇಕಾರರಿಗೆ ನೀಡುತ್ತಿರುವ ಸೌಲಭ್ಯಗಳ ಕುರಿತು ವರದಿ ತರಿಸಿಕೊಂಡು ರಾಜ್ಯದ ನೇಕಾರರ ಹಿತಕ್ಕಾಗಿ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

# ದೂಡಾ ಅಧ್ಯಕ್ಷರಿಂದ ಕಾಮಗಾರಿ ಪರಿಶೀಲನೆ



ದಾವಣಗೆರೆ, ಡಿ.16- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರು ಪ್ರಗತಿ ಯಲ್ಲಿರುವ ಕುಂದುವಾಡ ರಸ್ತೆಯ ಡಬಲ್ ರಿಂಗ್ ರಸ್ತೆಯ ಡಾಂಬರೀಕರಣ ರಸ್ತೆ ಕಾಮಗಾರಿಯನ್ನು ಇಂದು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಸಹಾಯಕ ಅಭಿಯಂತರ ಸೃಜಯ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ನಾಳೆ ದತ್ತಾತ್ರೇಯ ಜಯಂತಿ



ದಾವಣಗೆರೆ, ಡಿ.16- ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಡಿದ್ದು ದಿನಾಂಕ 18 ರ ಶನಿವಾರ ಶ್ರೀ ದತ್ತಾತ್ರೇಯ ಜಯಂತಿ ನಡೆಯಲಿದೆ. ಅಂದು ಬೆಳಿಗ್ಗೆ 8.30 ಕ್ಕೆ ಆರತಿ ಶ್ರೀ ಶಿರಡಿ ಸಾಯಿಬಾಬಾರವರಿಗೆ ಮತ್ತು ಶ್ರೀ ದತ್ತಾತ್ರೇಯ ಸ್ವಾಮಿಗೆ ಅಭಿಷೇಕ, ಅಲಂಕಾರ, ಆರತಿ ನಂತರ ಪ್ರಸಾದ ವಿನಿಯೋಗ ನಡೆಯುವುದು.

# ನಗರದಲ್ಲಿ ಇಂದು ಶ್ರೀ ಚೌಡಾಂಬಿಕಾ ದೇವಿ ಕಾರ್ತಿಕ

ಚೌಡಾಂಬಿಕಾ ದೇವಿ ದೇವಸ್ಥಾನದ ರಸ್ತೆ ಶ್ರೀ ಚೌಡಾಂಬಿಕಾ ದೇವಿಯವರ 64ನೇ ವರ್ಷದ ಕಡೆಯ ಕಾರ್ತಿಕೋತ್ಸವವು ಇಂದು ಸಂಜೆ 7 ಗಂಟೆಗೆ ನಡೆಯಲಿದೆ.

ನಾಳೆ ಶನಿವಾರ ಪ್ರಾತಃಕಾಲ ಶ್ರೀ ದೇವಿಗೆ ಪಂಚಾಮೃತ ಅಭಿಷೇಕ, ಶ್ರೀ ಸೂಕ್ತ, ಮಹಾಭಿಷೇಕ, ಸಹಸ್ರನಾಮ ಕುಂಕುಮಾರ್ಚನೆ, ಅಲಂಕಾರ, ಷೋಡಷೋಪಚಾರ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ.

# ರೇಣುಕಾ ಯಲ್ಲಮ್ಮ ದೇವಿ ಕಾರ್ತಿಕ

ವಿನೋಬನಗರ 4ನೇ ಮುಖ್ಯರಸ್ತೆ ಶಂಕರ್‌ನಾಗ್ ಸರ್ಕಲ್‌ನಲ್ಲಿರುವ ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನದಲ್ಲಿ ಇಂದು ಸಂಜೆ 7ಕ್ಕೆ ಕಾರ್ತಿಕೋತ್ಸವ ನಡೆಯಲಿದೆ.


**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು ಫೋ: 8496044942, 8277409101

1) 31-1-2022 & 11-2-2022.. 7 ದಿನಗಳ ಗುಜರಾತ್ ವಿಮಾನ ಪ್ರವಾಸ (ಸೋಮನಾಥ, ನಾಗೇಶ್ವರ, ದ್ವಾರಕ, ಪೋರ್ ಬಂದರ್, ಭಾವನಗರ, ಅಹಮಹಾಬಾದ್ ಸಬರಮತಿ ಆಶ್ರಮ, ಗಾಂಧಿನಗರ ಅಕ್ಷರದಾಮ, ಪಟೇಲ್ ಪ್ರತಿಮೆ) ರೂ. 28500/- (ಒಬ್ಬರಿಗೆ)
2) 26-2-2022.. 6 ದಿನಗಳ ಕಾಶಿ ಶಿವರಾತ್ರಿ ವಿಮಾನ ಪ್ರವಾಸ (ಕಾಶಿ, ಅಯೋಧ್ಯೆ, ಅಲಹಾಬಾದ್, ನೈಮಿಷಾರಣ್ಯ, ಗಯಾ, ಬುದ್ಧಗಯಾ)... ರೂ.26000/- (ಒಬ್ಬರಿಗೆ)
3) 20-3-2022 & 31-3-2022.. 9 ದಿನಗಳ ರಾಜಸ್ಥಾನ ವಿಮಾನ ಪ್ರವಾಸ (ಮೌಂಟ್ ಅಬು, ಜೈಪುರ, ಉದಯಪುರ, ಅಜ್ಮೀರ್, ಜೋದ್‌ಪುರ, ಪುಷ್ಕರ, ಜೈಸಲ್ಮೇರ್) ರೂ. 32000/- (ಒಬ್ಬರಿಗೆ)
4) 8-3-2022 & 9-4-2022, 8 ದಿನಗಳ ವೈಷ್ಣೋದೇವಿ, (ಅಮೃತಸರ, ಆಗ್ರಾ ಮಥುರಾ, ದೆಹಲಿ) ವಿಮಾನ ಪ್ರವಾಸ ರೂ. 29500/- (ಒಬ್ಬರಿಗೆ)
5) 28-5-2022 & 16-6-2022. 13 ದಿನಗಳ ಚಾರ್‌ಧಾಮ್ ವಿಮಾನ ಪ್ರವಾಸ (ಗಂಗೋತ್ರಿ, ಯಮುನೋತ್ರಿ, ಬದರಿನಾಥ, ಕೇದಾರನಾಥ, ಹರಿದ್ವಾರ, ಋಷಿಕೇಶ) ರೂ. 38000/- (ಒಬ್ಬರಿಗೆ)

ಎಲ್ಲಾ ಪ್ರವಾಸಗಳಿಗೆ ತಿಂಡಿ, ಸಸ್ಯಹಾರಿ ಊಟ, ಫ್ಯಾಮಿಲಿ ರೂಂ, ವಿಮಾನ ವೆಚ್ಚ ಸೇರಿರುತ್ತದೆ. (ಸ್ಥಳೀಯ ವೆಚ್ಚ ಪ್ರತ್ಯೇಕ)

**WANTED LECTURER**

✤ M.Sc., Micro Biology ✤ M.Sc., Pathology
✤ M.Sc., Nursing

*Hurry Up admission for 1st year Health Inspectar Course*

Address : **LUMBINI INSTITUTE OF PARAMEDICAL COLLEGE**
AVK College Road, 9th Cross, PJ Extension,
Opp. Latha Nursing Home, Davangere.
**+91 70195 86789, 99020 55335**

**ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ**
**Numero Astrologer & Palmistry**



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: **ಪಂ. ಅರುಣ್ ಕುಮಾರ್ ಆಚಾರ್ಯ**
ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ
ಮೊಬೈಲ್ : **94481 78626, 96068 18273**
ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ


### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಪ್ರಕಾಶ್ ಜಿ. ತಂದೆ ಗೋಣೆಪ್ಪ** ಇವರು ಈ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ಖರೀದಿಸುವ ಇಚ್ಛೆ ಹೊಂದಿರುತ್ತಾರೆ. ಸದರಿ ಆಸ್ತಿಯು ಈ ಹಿಂದೆ ಬಿ. **ನಾಗರಾಜ್ ಬಿನ್ ಬಸಪ್ಪ** ಜಿ.ಪಿ.ಎ. ಹೋಲ್ಡರ್ ಇವರಿಂದ **ಶ್ರೀಮತಿ ಶೋಭ ಬಸವರಾಜ್ ಕೋಂ ಬಿ.ಕೆ. ಓತಗೇರಿ** ಇವರು 27.11.1991 ರಂದು ಕ್ರಯಪತ್ರದ ಸಂಖ್ಯೆ 5694/91-92 ರಂತೆ ರಿಜಿಸ್ಟರ್ ಆಗಿರುತ್ತದೆ. ನಂತರ ಶ್ರೀಮತಿ ಶೋಭ ಬಸವರಾಜ್ ಇವರು ಈ ಆಸ್ತಿಯನ್ನು ಶ್ರೀ ಕೆ.ಹೆಚ್. ಮಹಾರುದ್ರಪ್ಪ ಬಿನ್ ಲೇ॥ ಗೌಡ್ರ ಕಲ್ಲಪ್ಪ ಇವರಿಗೆ ದಿನಾಂಕ 10.11.2000 ರಂದು ಕ್ರಯಪತ್ರದ ಸಂಖ್ಯೆ 6230/2000-01 ಮಾರಾಟ ಮಾಡಿರುತ್ತಾರೆ. ಸದರಿ ಈ ಎರಡೂ ಕ್ರಯ ಪತ್ರಗಳು ಈ ಹಿಂದೆ ಕಳೆದುಹೋಗಿರುತ್ತವೆ. ಈ ಬಗ್ಗೆ ಕೆ.ಟಿ.ಜೆ. ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ. ಸದರಿ ಈ ಎರಡೂ ಕ್ರಯಪತ್ರಗಳ ಬಗ್ಗೆ ಯಾರಿಂದಲಾದರೂ ತಂಟೆ - ತಕರಾರು ಇದ್ದಲ್ಲಿ ಈ ಪ್ರಕಟಣೆಯ ದಿನದಿಂದ 7 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ತಿಳಿಸುವುದು. ಅಲ್ಲದೆ ಈ ಎರಡೂ ಕ್ರಯಪತ್ರಗಳ ಬಗ್ಗೆ ಬೇರೆ ಯಾರೂ ವ್ಯವಹಾರ ಮಾಡಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಿದೆ.

**ಷೆಡ್ಯೂಲ್** : ದಾವಣಗೆರೆ ತಾ. ಕಸಬಾ ಹೋ. ಆವರಗೆರೆ ಗ್ರಾಮದ ರಿ. ಸರ್ವೆ ನಂ. 7/P ನಂತರ ಪೋಡಾಗಿ ರಿ. ಸರ್ವೆ ನಂ. 7/1P ವಿಸ್ತೀರ್ಣ 2 ಎಕರೆ 20 ಗುಂಟೆ ಜಮೀನು ಈ ಹಿಂದೆ ಚಿತ್ರದುರ್ಗ ಜಿಲ್ಲಾಧಿಕಾರಿಗಳಿಂದ ನಂ. ಎ.ಎಲ್.ಎನ್.ಎಸ್.ಆರ್. 362/84 ದಿನಾಂಕ 6.4.1985 ಪ್ರಕಾರ ಅಲಿನೇಷನ್ ಆಗಿದ್ದು ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟುಗಳ ಪೈಕಿ ಸೈಟ್ ನಂ. 83, ಡೋರ್ ನಂ. 874/7 ಅಳತೆ 25x54 ಅಡಿಗಳು.

**ಸಹಿ/- (ಗೋಪಾಲ್.ಎಂ.)**, ವಕೀಲರು,
#1049/11, 2ನೇ ಮೇನ್, 5ನೇ ಕ್ರಾಸ್, 1ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ-577005. ಮೊ: 9448233500

**ಸಹಿ/- ಕಕ್ಷಿದಾರರು**
**(ಪ್ರಕಾಶ್ ಜಿ.)**

### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಬಿ.ವಿ.ಮಂಜುನಾಥ ಬಿನ್ ಉಮಾಪತಿ** ವಾಸ: ಕೆ.ಟಿ.ಜೆ. ನಗರ, 2ನೇ ಕ್ರಾಸ್, ದಾವಣಗೆರೆ, ಆದ ಇವರು, ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಅದರ ಮಾಲೀಕರಾದ **ಶ್ರೀ ಮತಿ ಬಿ.ಎನ್.ಸವಿತ ಕೋಂ ಎಸ್. ಪಿ. ರುದ್ರಸ್ವಾಮಿ** ವಾಸ: ಡೋರ್ ನಂ. 382/182, ಅಂಬಿಕಾ ನಗರ, ಬಿ' ಬ್ಲಾಕ್, ಎಸ್.ಎಸ್ ಆಸ್ಪತ್ರೆ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ, ಆದ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಈ ಬಗ್ಗೆ ಮಾತುಕತೆ ನಡೆಸಿರುತ್ತಾರೆ.

ನಮ್ಮ ಕಕ್ಷಿದಾರರು ಖರೀದಿ ಮಾಡಲು ಇಚ್ಛಿಸಿರುವ ಷೆಡ್ಯೂಲ್ ಸೊತ್ತಿನ ಬಗ್ಗೆ ಯಾರಿಂದಲಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣಾ ದಿನಾಂಕದಿಂದ ಏಳು (7) ದಿವಸಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಏಳು (7) ದಿವಸದ ಅವಧಿ ಮೀರಿದ ನಂತರ ಬರುವ ಯಾವುದೇ ತಂಟೆ, ತಕರಾರು, ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಮತ್ತು ಸದರಿ ಷೆಡ್ಯೂಲ್ ಸೊತ್ತಿನ ಬಗ್ಗೆ ನಮ್ಮ ಕಕ್ಷಿದಾರರು ಸೊತ್ತಿನ ಮಾಲೀಕರಿಂದ ಕ್ರಯದ ವ್ಯವಹಾರವನ್ನು ಮುಂದುವರೆಸುವರು, ಅವಧಿ ಮೀರಿದ ನಂತರದಲ್ಲಿ ಬಂದಂತಹ ಯಾವುದೇ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆಗಳು ನನ್ನ ಕಕ್ಷಿದಾರರಿಗೆ ಎಳ್ಳಷ್ಟೂ ಪ್ರತಿಬಂಧಿಸುವುದಿಲ್ಲ ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ ಸೊತ್ತು**

1) ದಾವಣಗೆರೆ ಸಬ್ ರಿಜಿಸ್ಟರ್ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ (ತಾ), ತೋಳಹುಣಸೆ ಗ್ರಾಮ ಪಂಚಾಯಿತಿ, ವ್ಯಾಪ್ತಿಗೆ ಸೇರಿದ ಪಾಮೇನಹಳ್ಳಿ ಗ್ರಾಮದ ರಿ.ಸರ್ವೆ ನಂ.58/1ಎ1 ರಲ್ಲಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿದ್ದು, ಸದರಿ ಪ್ರದೇಶದಲ್ಲಿ ವಿಂಗಡಿಸಲಾಗಿರುವ ಸೈಟುಗಳ ಬಗ್ಗೆ ದಾ-ಹ- ಪ್ರಾಧಿಕಾರದ ಕಛೇರಿಯಿಂದ ಅನುಮೋದನೆಗೊಂಡ ನಕ್ಷೆಯಲ್ಲಿ ಕಂಡ ನಿವೇಶನಗಳಿಗೆ ತೋಳಹುಣಸೆ ಗ್ರಾಮ ಪಂಚಾಯಿತಿಯಿಂದ ಆರ್.ಡಿ.ಪಿ.ಆರ್ ನಂ. ಹಾಗೂ ಖಾತೆ ನಮೂದಾಗಿರುವ ನಿವೇಶನಗಳ ಪೈಕಿ ಸೈಟ್ ನಂ.7ರ ಸ್ವತ್ತಿನ ಸಂಖ್ಯೆ ನಂ. 151200202100220224 ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ 153/7 ಅಳತೆ 6.096×9.144 ಮೀಟರ್‌ವುಳ್ಳ ನಿವೇಶನಕ್ಕೆ ಚಕ್ಕುಬಂದಿ ಪೂರ್ವಕ್ಕೆ- ಸೈಟ್ ನಂ.6, ಪಶ್ಚಿಮಕ್ಕೆ- ಸೈಟ್ ನಂ.8, ಉತ್ತರಕ್ಕೆ- 25 ಅಡಿ ರಸ್ತೆ, ದಕ್ಷಿಣಕ್ಕೆ- ಸೈಟ್ ನಂ.46

2) ದಾವಣಗೆರೆ ಸಬ್ ರಿಜಿಸ್ಟರ್ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ (ತಾ), ತೋಳಹುಣಸೆ ಗ್ರಾ ಪಂಚಾಯಿತಿ, ವ್ಯಾಪ್ತಿಗೆ ಸೇರಿದ ಪಾಮೇನಹಳ್ಳಿ ಗ್ರಾಮದ ರಿ. ಸರ್ವೆ ನಂ. 58/1ಎ1ರಲ್ಲಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿದ್ದು ಸದರಿ ಪ್ರದೇಶದಲ್ಲಿ ವಿಂಗಡಿಸಲಾಗಿರುವ ಸೈಟುಗಳ ಬಗ್ಗೆ ದಾ-ಹ- ಪ್ರಾಧಿಕಾರದ ಕಛೇರಿಯಿಂದ ಅನುಮೋದನೆಗೊಂಡ ನಕ್ಷೆಯಲ್ಲಿ ಕಂಡ ನಿವೇಶನಗಳಿಗೆ ತೋಳಹುಣಸೆ ಗ್ರಾಮ ಪಂಚಾಯಿತಿಯಿಂದ ಆರ್.ಡಿ.ಪಿ.ಆರ್ ನಂ. ಹಾಗೂ ಖಾತೆ ನಮೂದಾಗಿರುವ ನಿವೇಶನಗಳ ಪೈಕಿ ಸೈಟ್ ನಂ.8ರ ಸ್ವತ್ತಿನ ಸಂಖ್ಯೆ ನಂ. 151200202100220225 ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ 153/8 ಅಳತೆ 6.096×9.144 ಮೀಟರ್‌ವುಳ್ಳ ನಿವೇಶನಕ್ಕೆ ಚಕ್ಕುಬಂದಿ- ಪೂರ್ವಕ್ಕೆ- ಸೈಟ್ ನಂ.7, ಪಶ್ಚಿಮಕ್ಕೆ- ಸೈಟ್ ನಂ.9, ಉತ್ತರಕ್ಕೆ-25 ಅಡಿ ರಸ್ತೆ, ದಕ್ಷಿಣಕ್ಕೆ- ಸೈಟ್ ನಂ.45

**ಮಂಜುನಾಥ.ಬಿ.ಹೆಚ್**
ಕಕ್ಷಿದಾರರು

**ಎಸ್.ನಾಗರಾಜ್**
(ಆನೆಕೊಂಡ) ಕಕ್ಷಿದಾರರ ಪರ ವಕೀಲರು ವಿಳಾಸ: ರೂಂ ನಂ.3, ಅಮರ್ ಬಿಲ್ಡಿಂಗ್,1ನೇ ಮಹಡಿ, 5ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ

### ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಸ್ಟೇಡಿಯಂ ಎದುರು, ಹದಡಿ ರೋಡ್, ದಾವಣಗೆರೆ-577002.**
**ದೂ: 08192-250364, ಮೊ: 94483-65262, ಫ್ಯಾಕ್ಸ್ : 08192-231469**

ಸಂಖ್ಯೆ : ಕಾಇಂ(ವಿ)/ಬೃಕಾವಿ/ಸ.ಕಾ.ಇಂ(ಕ)/ಕಿ.ಇಂ(ವಿ)/ದಾ/2021-22/3048-53 ದಿನಾಂಕ : 16-12-2021

**ಪತ್ರಿಕಾ ಪ್ರಕಟಣೆ-ಸಾರ್ವಜನಿಕ ಎಚ್ಚರಿಕೆ**

ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಸ್ವ-ನಿರ್ಮಾಣ ಅಡಿಯಲ್ಲಿ ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ ಗುತ್ತೂರು ಗ್ರಾಮದಲ್ಲಿ ಇರುವ 220/66 ಕೆ.ವಿ. ವಿದ್ಯುತ್ ಉಪಕೇಂದ್ರದಿಂದ ದೀಟೂರು ಹತ್ತಿರ ನಿರ್ಮಿಸಿರುವ 66 ಕೆ.ವಿ. ಜಗಳೂರು ಏತ ನೀರಾವರಿ ವಿದ್ಯುತ್ ಉಪಕೇಂದ್ರಕ್ಕೆ ಹೊಸದಾಗಿ ನಿರ್ಮಿಸಿರುವ 2.105 ಕಿಮೀ ಉದ್ದದ 66 ಕೆ.ವಿ. ವಿದ್ಯುತ್ ಮಾರ್ಗದ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದ್ದು, **ಸದರಿ ಮಾರ್ಗವು ಹರಿಹರ ತಾಲ್ಲೂಕಿನ ಗುತ್ತೂರು ಮತ್ತು ದೀಟೂರು ಗ್ರಾಮಗಳ ವ್ಯಾಪ್ತಿಯಲ್ಲಿ ಹಾದುಹೋಗಿರುತ್ತದೆ.**

ಆದ್ದರಿಂದ ಮೇಲೆ ತಿಳಿಸಿರುವ ಕಾಮಗಾರಿ ಬಗ್ಗೆ ಸಾರ್ವಜನಿಕರಿಗೆ ತಿಳಿಯಬಯಸುವುದೇನೆಂದರೆ, ಈ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ದಿನಾಂಕ 18.12.2021 ರಂದು ಅಥವಾ ತದನಂತರ ವಿದ್ಯುತ್ ಪ್ರವಹಿಸಲಾಗುವುದು. ಕಾರಣ ವಿದ್ಯುತ್ ಗೋಪುರ ಹತ್ತುವುದಾಗಲೀ ಅಥವಾ ಅದಕ್ಕೆ ಪ್ರಾಣಿಗಳನ್ನು ಕಟ್ಟುವುದಾಗಲೀ, ಹಸಿರು ಟೊಂಗೆಗಳನ್ನು ವಿದ್ಯುತ್ ಮಾರ್ಗಕ್ಕೆ ಎಸೆಯುವುದು ಪ್ರಾಣಾಪಾಯಕಾರಿಯಾಗಿರುವುದು. ಆದ್ದರಿಂದ ಸಾರ್ವಜನಿಕರು ಮೇಲ್ಕಾಣಿಸಿದ ಕೃತ್ಯಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಇಂತಹ ಕೃತ್ಯಗಳನ್ನು ಯಾರಾದರೂ ಎಸಗಿದಲ್ಲಿ ಮುಂದೆ ಒದಗಬಹುದಾದ ಅಪಾಯಗಳಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಎಂದು ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ, ದಾವಣಗೆರೆ ರವರು ತಿಳಿಸಿರುತ್ತಾರೆ.

**ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),**
ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ದಾವಣಗೆರೆ

### ಜಗಳೂರು ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಜಗಳೂರು.

**ನೋಂದಣಿ ಸಂಖ್ಯೆ: ಎ. ಆರ್. 1563/17-09-1941, ದೂರವಾಣಿ: 08196-227339**

**2020-2021 ನೇ ಸಾಲಿನ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ**

**ಈ ಬ್ಯಾಂಕಿನ 2020-2021 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 20-12-2021 ನೇ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ವಾಲ್ಮೀಕಿ ಸಮುದಾಯ ಭವನ, ಓಂಕಾರೇಶ್ವರ ಬಡಾವಣೆ, ಜಗಳೂರು ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಕೆ. ಬಿ. ಸಿದ್ದೇಶ್ ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ಣಯಿಸಲಾಗಿದೆ. ಕಾರಣ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಕೋರಿದೆ.**

**ಕಾರ್ಯಕ್ರಮಗಳು :**

- ✧ ದೇವತಾ ಪ್ರಾರ್ಥನೆ. ✧ ಸ್ವಾಗತ ಭಾಷಣ
- ✧ 2020-21 ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಓದಿ ರೆಕಾರ್ಡ್ ಮಾಡುವುದು.
- ✧ 2019-20 ನೇ ಹಿಂದಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
- ✧ 2020-21 ನೇ ಸಾಲಿನ ಆಡಳಿತ ವರದಿ ಪರಿಶೀಲಿಸುವುದು.
- ✧ 2020-21 ನೇ ಸಾಲಿನ ಆಡಿಟ್ ಆದ ಜಮಾ-ಖರ್ಚು ತಃಖ್ತೆ, ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಓದಿ ಅಂಗೀಕರಿಸುವುದು. ಹಾಗೂ ಲೆಕ್ಕ ಪರಿಶೋಧನಾ ಆಕ್ಷೇಪಣೆಗಳಿಗೆ ಕಾರ್ಯನಿರ್ವಾಹಕರು ನೀಡಿರುವ (ಅನುಪಾಲನಾ ವರದಿ) ಅನುಮೋದಿಸುವ ವಿಚಾರ.
- ✧ 2020-21 ನೇ ಸಾಲಿನ ಅಂದಾಜು ಬಡ್ಜೆಟ್‌ಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳಿಗೆ ಅನುಮೋದಿಸತಕ್ಕ ವಿಚಾರ.
- ✧ 2021-22 ನೇ ಸಾಲಿಗೆ ಅಂದಾಜು ಬಡ್ಜೆಟ್ ಮಂಜೂರು ಮಾಡುವುದು.
- ✧ ಬ್ಯಾಂಕಿನ 2021-2022 ನೇ ಸಾಲಿಗೆ ಲೆಕ್ಕ ಪರಿಶೋಧನೆಗೆ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳುವ ಬಗ್ಗೆ.
- ✧ ನಿಗದಿತ ಅವಧಿಯೊಳಗೆ ಚರ್ಚೆಗೆ ಬಂದಿರುವ ವಿಷಯಗಳನ್ನು ಚರ್ಚಿಸುವುದು.
- ✧ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.
- ✧ ಅಧ್ಯಕ್ಷರ ಭಾಷಣ ✧ ವಂದನಾರ್ಪಣೆ.

**ಈಗಾಗಲೇ ಸರ್ವಸದಸ್ಯರಿಗೂ ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಈವರೆಗೂ ತಲುಪದಿದ್ದಲ್ಲಿ ಈ ಪತ್ರಿಕೆಯನ್ನು ಪರಿಗಣಿಸಿ ಸಭೆಗೆ ಹಾಜರಾಗಲು ಕೋರಿದೆ.**

**ಮೇಲ್ಕಂಡ ಸಭೆಯನ್ನು ಆನ್‌ಲೈನ್ ವರ್ಚ್ಯುಯಲ್ ಮೂಲಕ ಮಾಡಲು ಆಹ್ವಾನ ಪತ್ರಿಕೆಯಲ್ಲಿ ನಮೂದಿಸಲಾಗಿತ್ತು. ಆದರೆ ಸರ್ಕಾರದ ಆದೇಶದಲ್ಲಿ ಕೋವಿಡ್-19 ರ ನಿಯಂತ್ರಣಕ್ಕೆ ಸುರಕ್ಷತೆ ಮತ್ತು ಅಂತರ ಕಾಪಾಡಿಕೊಂಡು ಸಭೆ ನಡೆಸಲು ಅವಕಾಶವಿರುವುದರಿಂದ ಆನ್‌ಲೈನ್ ವರ್ಚ್ಯುಯಲ್ ಸಭೆಯನ್ನು ನಡೆಸಲಾಗುತ್ತಿಲ್ಲ. ಮಾನ್ಯ ಸದಸ್ಯರು ಸಭೆಗೆ ಖುದ್ದು ಹಾಜರಾಗಿ ಕಡ್ಡಾಯವಾಗಿ ಸಭೆ ಯಶಸ್ವಿಗೊಳಿಸಲು ಕೋರಿದೆ.**

**ಆಡಳಿತ ಮಂಡಳಿಯ ಪರವಾಗಿ**
**ಸ್ಥಳ: ಜಗಳೂರು, ದಿನಾಂಕ: 19-11-2021**

**ಶ್ರೀ ಕೆ. ಬಿ. ಸಿದ್ದೇಶ್**
**ಅಧ್ಯಕ್ಷರು**

**ಟಿ. ಎನ್. ಭೂಷಣ್**
**ಪ್ರಭಾರಿ ವ್ಯವಸ್ಥಾಪಕರು.**

# ಅಲ್ಪಸಂಖ್ಯಾತ ಹಿಂದೂಗಳ ಹಕ್ಕಿಗೆ ಧಕ್ಕೆ

## ಹೈಕೋರ್ಟ್ ವಿಚಾರಣೆಗಳನ್ನು ವರ್ಗಾಯಿಸಿಕೊಳ್ಳಲು ಸುಪ್ರೀಂ ಪರಿಶೀಲನೆ

ನವದೆಹಲಿ, ಡಿ. 16 – ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು, ಬೌದ್ಧರು ಹಾಗೂ ಪಾರ್ಸಿಗಳು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಹುಸಂಖ್ಯಾತರಾಗಿದ್ದರೂ, ಅವರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುವ ಕೇಂದ್ರದ ಅಧಿಸೂಚನೆ ಪ್ರಶ್ನಿಸಿ ಹೈಕೋರ್ಟ್‌ಗಳಲ್ಲಿ ನಡೆಯುತ್ತಿರುವ ವಿಚಾರಣೆಯನ್ನು ತನ್ನಲ್ಲಿಗೆ ವರ್ಗಾಯಿಸಿಕೊಳ್ಳುವ ಅರ್ಜಿಯನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಈ ವಿಷಯದ ವಿಚಾರಣೆಗೆ ಆರು ಬಾರಿ ದಾಖಲಿಸಿಕೊಂಡು ಕೈ ಬಿಡಲಾಗಿದೆ. ಹೀಗಾಗಿ ವಿಚಾರಣೆ ನಡೆಸಬೇಕು ಎಂದು ವಕೀಲ ಅಶ್ವನಿ ಉಪಾಧ್ಯಾಯ್ ಅವರು ನ್ಯಾಯಮೂರ್ತಿ ಎಸ್.ಕೆ. ಕೌಲ್ ಅವರ ಪೀಠದಲ್ಲಿ ಮನವಿ ದಾಖಲಿಸಿದರು.

1992ರ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ ಕಾಯ್ದೆ ಹಾಗೂ 2004ರ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಆಯೋಗ ಕಾಯ್ದೆಯ ಸಿಂಧುತ್ವ ಪ್ರಶ್ನಿಸುತ್ತಿರುವುದಾಗಿ ಅವರು ಹೇಳಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾವಿರಾರು ಕೋಟಿ ರೂ.ಗಳನ್ನು ಅಲ್ಪಸಂಖ್ಯಾತರಿಗಾಗಿ ಖರ್ಚು ಮಾಡುತಿವೆ. ಆದರೆ, ಹಲವು ರಾಜ್ಯಗಳಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳಿಗೆ ಈ ಸೌಲಭ್ಯಗಳು ಸಿಗುತ್ತಿಲ್ಲ ಎಂದವರು ಅರ್ಜಿಯಲ್ಲಿ ಹೇಳಿದ್ದಾರೆ.

ದೆಹಲಿ, ಮೇಘಾಲಯ ಹಾಗೂ ಗೌಹಾತಿ ಹೈಕೋರ್ಟ್‌ಗಳಲ್ಲಿ ಈ ಕುರಿತು ಅರ್ಜಿಗಳ ವಿಚಾರಣೆ ನಡೆಯುತ್ತಿದೆ.

ಹಲವು ಪ್ರಕರಣಗಳು ದಾಖಲಾಗುವುದು ಹಾಗೂ ತದ್ವಿರುದ್ಧದ ನಿಲುವುಗಳು ಬರುವ ಬದಲು ಈ ವಿಚಾರಣೆಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಿಕೊಳ್ಳಬೇಕೆಂದು ಕೋರಲಾಗಿದೆ.

ಅಲ್ಪಸಂಖ್ಯಾತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಬಹುಸಂಖ್ಯಾತರು ಪಡೆದುಕೊಳ್ಳುತ್ತಿರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಅರ್ಜಿದಾರರು ಹೇಳಿದ್ದಾರೆ.



ಚಿತ್ರ : ಜಿಗಳಿ ಪ್ರಕಾಶ್

**ಬೀಜ ಚಲ್ಲಿದ ರೈತರು...**

ಭದ್ರಾ ಅಚ್ಚು ಕಟ್ಟು ಪ್ರದೇಶದ ಕೊನೆ ಭಾಗದ ರೈತರು ಭತ್ತದ ಕಟಾವು ಮಾಡುತ್ತಿದ್ದಾರೆ. ಇತ್ತ ತುಂಗಭದ್ರಾ ನದಿ ಪಾತ್ರ ಮತ್ತು ದೇವರಬೆಳಕೆರೆ ಪಿಕಪ್ ನೀರಿನ ಆಸರೆ ಹಾಗೂ ಬೋರ್‌ವೆಲ್ ಸೌಲಭ್ಯ ಇರುವ ರೈತರು ಬೇಸಿಗೆ ಹಂಗಾಮಿನ ಬೆಳೆಗಾಗಿ ನಾಟಿ ಮಾಡಲು ಭತ್ತದ ಬೀಜ ಚೆಲ್ಲುತ್ತಿರುವ ದೃಶ್ಯ ಗುರುವಾರ ಧೂಳೆಹೊಳೆ ಸಮೀಪ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿತು.

## ನಗರದ ಉತ್ಸವಾಂಭ ದೇವಸ್ಥಾನದಲ್ಲಿ ಕಾರ್ತಿಕ



ವಸಂತ ರಸ್ತೆ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭ ದೇವಸ್ಥಾನದಲ್ಲಿ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ಈ ದೇವರುಗಳ ಕಾರ್ತಿಕ ದೀಪೋತ್ಸವವನ್ನು ಇಂದು ಹಮ್ಮಿಕೊಳ್ಳಲಾಗಿದೆ. ಬೆಳಗಿನ ಜಾವ 4.30 ಕ್ಕೆ ಮಹಾರುದ್ರಾಭಿಷೇಕ ನೆರವೇರಿಸಲಾಗುವುದು. ಸಂಜೆ 7.30 ಕ್ಕೆ ಕಾರ್ತಿಕ ದೀಪೋತ್ಸವ ಆಚರಿಸಲಾಗುವುದು.

# ಬ್ಯಾಂಕ್ ಖಾಸಗೀಕರಣ ಪ್ರಸ್ತಾಪ ಕೈಬಿಡಿ

## ಕೇಂದ್ರ ಸರ್ಕಾರದ ನಿರ್ಧಾರ ಖಂಡಿಸಿ ನಗರದಲ್ಲಿ ಬ್ಯಾಂಕ್ ನೌಕರರ ಮುಷ್ಕರ




ದಾವಣಗೆರೆ, ಡಿ. 16- ಬ್ಯಾಂಕ್ ಖಾಸಗೀಕರಣ ವಿರೋಧಿಸಿ, ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆ ವತಿಯಿಂದ ಎಸ್‌ಬಿಐ ಮುಂಭಾಗ ಇಂದು ಪ್ರತಿಭಟನೆ ನಡೆಸಲಾಯಿತು.

ಸಾರ್ವಜನಿಕ ಸ್ವಾಮ್ಯದ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆ ಖಂಡಿಸಿದೆ.

ವೇದಿಕೆಯ ಜಿಲ್ಲಾ ಘಟಕದ ನೇತೃತ್ವದಲ್ಲಿ ನಗರದ ಮಂಡಿಪೇಟೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಮುಂಭಾಗ ಮತ ಪ್ರದರ್ಶನ ನಡೆಯಿತು.

ವೇದಿಕೆ ಜಿಲ್ಲಾ ಸಹ ಸಂಚಾಲಕ ಕೆ.ಎನ್. ಗಿರಿರಾಜ್ ಮಾತನಾಡಿ, ಸುಧಾರಣೆಯ ನೆಪದಲ್ಲಿ ಬ್ಯಾಂಕುಗಳ ಖಾಸಗೀಕರಣ, ಜೀವ ವಿಮಾ ನಿಗಮದಲ್ಲಿ ಬಂಡವಾಳ ಹಿಂತೆಗೆತ ಮತ್ತು ಖಾಸಗೀಕರಣ, ವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಮಿತಿಯಲ್ಲಿ ಗಣನೀಯ ಹೆಚ್ಚಳ, ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ಸರ್ಕಾರಿ ಬಂಡವಾಳದ ಹಿಂತೆಗೆತ ಮತ್ತು ಮಾರಾಟ ಮೊದಲಾದ ರಾಷ್ಟ್ರೀಕರಣ ವಿರೋಧಿ ಘೋಷಣೆಗಳನ್ನು ಕಾರ್ಯ ರೂಪಕ್ಕೆ ತರಲು ಪ್ರಯತ್ನಿಸಿರುವುದನ್ನು ಖಂಡಿಸಿ ಈ ಮುಷ್ಕರ ನಡೆಸುತ್ತಿರುವುದಾಗಿ ಹೇಳಿದರು.

ಎಐಟಿಯುಸಿ ರಾಜ್ಯ ಉಪಾಧ್ಯಕ್ಷ ಹೆಚ್.ಜಿ. ಉಮೇಶ್ ಮಾತನಾಡಿ, 1969 ರ ಬ್ಯಾಂಕ್ ರಾಷ್ಟ್ರೀಕರಣ ಪೂರ್ವದಲ್ಲಿ 550 ಖಾಸಗಿ ಬ್ಯಾಂಕುಗಳು ಹಾಗೂ ನಂತರದಲ್ಲಿ 38 ಖಾಸಗಿ ಬ್ಯಾಂಕುಗಳು ಮುಳುಗಡೆಯಾಗಿವೆ. ಆದರೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳ ಅಸ್ತಿತ್ವಕ್ಕೆ ಧಕ್ಕೆಯಾಗಿಲ್ಲ. ಸಾರ್ವಜನಿಕ ಬ್ಯಾಂಕುಗಳು ದೇಶದ ಆಸ್ತಿ. ಇದನ್ನು ರಕ್ಷಿಸಿ, ಬೆಳೆಸಬೇಕೆಂದು ಕರೆ ನೀಡಿದರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಮಾತನಾಡಿ, ದೇಶದ ಪ್ರತಿ ಹಳ್ಳಿಗೂ ಬ್ಯಾಂಕಿಂಗ್ ಸೌಲಭ್ಯ ಸಿಗಬೇಕು. ಈಗಿರುವ ಬ್ಯಾಂಕಿಂಗ್ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಬೇಕು ಹಾಗೂ ವಿಸ್ತಾರ ಗೊಳಿಸಬೇಕೆಂದು ಒತ್ತಾಯಿಸಿದರು.

ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘಟನೆಯ ಮುಖಂಡ ಕಿರಣ್ ರಜಪೂತ್ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟದ ಖಜಾಂಚಿ ಜಿ.ಬಿ. ಶಿವಕುಮಾರ್ ಮಾತನಾಡಿದರು.

ಬಿ. ಆನಂದಮೂರ್ತಿ, ಹೆಚ್.ಜಿ. ಸುರೇಶ್, ಹೆಚ್.ಎಸ್. ತಿಪ್ಪೇಸ್ವಾಮಿ, ಬಿ.ಎ. ಸುರೇಶ್, ವಿನೋದ್ ತೋರಗಲ್, ಆರ್. ಆಂಜನೇಯ, ವಿ.ಆರ್. ಹರೀಶ್, ಕೆ. ಶಶಿಶೇಖರ್, ಎಂ.ಎಸ್. ವಾಗೀಶ್, ಎಂ.ಪಿ. ಕಿರಣಕುಮಾರ್, ವಿ.ಎಂ. ತಿಪ್ಪೇಸ್ವಾಮಿ, ಬಿ.ಎ. ಸುರೇಶ್, ಶಶಿಕುಮಾರ್, ದುರುಗಪ್ಪ, ಮಂಜುನಾಥ್, ಅನಿಲ್ ಕುಮಾರ್, ಕಾಡಜ್ಜಿ ವೀರಪ್ಪ, ರವಿಶಂಕರ್, ಅಜಯ್ ಕುಮಾರ್, ಎಂ.ಎ. ಸಿದ್ದಲಿಂಗಯ್ಯ, ಶಾರದಾ ಮೂಡಲಗಿರಿಯಪ್ಪ, ದಿಳ್ಳೆಪ್ಪ, ಜ್ಞಾನೇಶ್ವರ, ಜಗಳೂರು ತಿಪ್ಪೇಸ್ವಾಮಿ, ರಮೇಶ್, ಶಿವಮೂರ್ತಿ ಪೂಜಾರ್, ಡಿ.ಎ. ಸಾಕಮ್ಮ, ಶ್ವೇತಾ, ನಿತ್ಯಾನಂದ ಡೊಂಗ್ರೆ, ದೀಪಾ, ಗೀತಾ, ರೇಖಾ, ಸುಮಂತ್ ಭಟ್, ಟಿ.ಕೆ. ಗೊಂಬಿ, ಹೆಚ್. ನಾಗರಾಜ್, ಶಶಿಕುಮಾರ್, ಆಶಾ ಜ್ಯೋತಿ, ಸುನಂದಮ್ಮ, ಸುರೇಶ್ ಮುಂತಾದವರು ಪಾಲ್ಗೊಂಡಿದ್ದರು.

# ಶ್ರೀ ಚೌಡಾಂಬಿಕ ದೇವಿ ಇತಿಹಾಸ, ದಿವ್ಯ ಅನುಗ್ರಹ ಪುಸ್ತಕ ಬಿಡುಗಡೆ




**ದೈವಿಕ ಶಕ್ತಿ ಕೇಂದ್ರವಾಗಿಸಿದ ಶಾಮನೂರು ಸೀನಪ್ಪ ಮನೆತನದ ಕಾರ್ಯ ಮೆಚ್ಚುವಂತಹದ್ದು.**
**- ಎಸ್.ಟಿ. ಕುಸುಮ ಶ್ರೇಷ್ಠಿ, ಶ್ರೀಧರ ಸೇವಾ ಟ್ರಸ್ಟ್ ಅಧ್ಯಕ್ಷರು**

ದಾವಣಗೆರೆ, ಡಿ.16- ಹಣಕ್ಕಾಗಿ ಆಸೆ ಪಡದೇ ತಮ್ಮ ಜಾಗವನ್ನು ದೈವಿಕ ಶಕ್ತಿ ಕೇಂದ್ರವಾಗಿಸಿ, ಶ್ರೀ ಚೌಡಾಂಬಿಕ ದೇವಿ ಹಾಗೂ ಶ್ರೀ ಶ್ರೀಧರ ಸ್ವಾಮಿಗಳ ಕೃಪಾಶೀರ್ವಾದ ಭಕ್ತರಿಗೆ ಕರುಣಿಸುವ ಉತ್ತಮ ಕಾಯಕವನ್ನು ಶಾಮನೂರು ಕುಟುಂಬದ ಎಸ್.ಎನ್. ಪಾರ್ಥನಾಥ್ ಮಾಡಿದ್ದಾರೆ ಎಂದು ವರ್ತಕರೂ, ಶ್ರೀಧರ ಸೇವಾ ಟ್ರಸ್ಟ್ ಅಧ್ಯಕ್ಷರೂ ಆದ ಎಸ್.ಟಿ. ಕುಸುಮ ಶ್ರೇಷ್ಠಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಬಿ.ಟಿ. ಗಲ್ಲಿಯಲ್ಲಿ ಚೌಡೇಶ್ವರಿ ಕಾಂಪ್ಲೆಕ್ಸ್ ನಲ್ಲಿನ ಗುರು ಮಂದಿರ ಸಭಾಂಗಣದಲ್ಲಿ ಶ್ರೀಧರ ಸೇವಾ ಟ್ರಸ್ಟ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಶ್ರೀ ಚೌಡಾಂಬಿಕ ದೇವಿಯ ಇತಿಹಾಸ ಮತ್ತು ದಿವ್ಯ ಅನುಗ್ರಹ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

92 ವರ್ಷಗಳ ಹಿಂದೆ ಖರೀದಿಸಲಾಗಿದ್ದ ಜಾಗದಲ್ಲಿ ಪ್ರತಿಮೆ ಸಿಕ್ಕಾಗ ಅದರ ಬಗ್ಗೆ ಹಲವರಿಂದ ಇದು ಆದಿ ಶಕ್ತಿ ಸ್ವರೂಪಿಣಿ ಚೌಡೇಶ್ವರಿ ದೇವಿಯಾಗಿದ್ದು, ಪೂಜಿಸಿದರೆ ಒಳಿತಾಗುವುದೆಂಬ ಅಭಿಪ್ರಾಯ ವ್ಯಕ್ತವಾಯಿತು. ತಮ್ಮ ಭಾವ ಪಾರ್ಥನಾಥ್ ಅವರು ಇದೀಗ ಚೌಡಾಂಬಿಕ ದೇವಿಯ ಭವ್ಯ ದೇವಸ್ಥಾನ ನಿರ್ಮಿಸಿದ್ದು, ವರ್ತಕರೂ ಸಹ ಈ ದೇವಿಯ ದರ್ಶನ ಪಡೆದೇ ತಮ್ಮ ಮುಂದಿನ ವ್ಯಾಪಾರ ಕಾರ್ಯ ಕೈಗೊಳ್ಳುವ ಪದ್ಧತಿ ರೂಢಿಸಿಕೊಂಡಿದ್ದಾರೆ. ಅಂತೆಯೇ ಈ ದೇವಿಯ ಮಹಿಮೆಯೂ ಸಹ ಇದೆ. ತಮ್ಮ ಮನೆಗೆ ಬಂದಿದ್ದ ಶ್ರೀಧರ ಸ್ವಾಮಿಗಳ ಪಾದುಕೆಯನ್ನೂ ಸಹ ಇಲ್ಲಿ ಸ್ಥಾಪಿಸಿ ಅವುಗಳನ್ನು ಪೂಜಿಸಲಾಗುತ್ತಿದ್ದು, ಇದೊಂದು ಧಾರ್ಮಿಕ ಶಕ್ತಿ ಕೇಂದ್ರವಾಗಿದೆ ಎಂದು ತಿಳಿಸಿದರು.


ಶಾಮನೂರು ಸೀನಪ್ಪ ಅವರ ಅಂಗಡಿ ಎಂದರೆ ನಗರದಲ್ಲಿ ಹಳಬರಿಗೆ ಚಿರಪರಿಚಿತ. ದಾನ, ಧರ್ಮ ಮಾಡಿದ ಶಾಮನೂರು ಕುಟುಂಬದ ಹಿರಿಯರಾದ ಶ್ರೀನಿವಾಸ್ ಮತ್ತು ಈ ಕುಟುಂಬದ ಇತಿಹಾಸವೂ ಇದೆ ಎಂದು ಹೇಳಿದರು. ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು, ಜೀವನ ಒಂದು ನಿಮಿಷದಲ್ಲಿ ಬದಲಾಗುವುದಿಲ್ಲ. ಆದರೆ ಒಂದು ನಿಮಿಷದಲ್ಲಿ ತೆಗೆದುಕೊಂಡ ನಿರ್ಧಾರ ಇಡೀ ಜೀವನವನ್ನೇ ಬದಲಿಸಲಿದೆ ಎಂಬುದಕ್ಕೆ ಈ ದೇವಸ್ಥಾನ ಸ್ಥಾಪಿಸಿದ್ದೈವಿಕಶಕ್ತಿನೆಲೆಸುವಂತೆಮಾಡಿರುವುದೇ ಸಾಕ್ಷಿಯಾಗಿದೆ ಎಂದರು.

ಪುಸ್ತಕ ಬರೆದ ಎಸ್.ಎನ್. ಪಾರ್ಥನಾಥ್ ಮತ್ತು ಉಮಾ ಪಾರ್ಥನಾಥ್ ಮಾತನಾಡಿದರು. ಸುಲೋಚನಮ್ಮ ಅವರು ಪುಸ್ತಕವನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಹೆಚ್.ಬಿ. ಮಂಜುನಾಥ್ ಸೇರಿದಂತೆ ಶಾಮನೂರು ಮನೆತನದವರು ಭಾಗವಹಿಸಿದ್ದರು. ಪೂರ್ಣಿಮಾ ಅತಿಥಿ ಪರಿಚಯ ಮಾಡಿದರು. ಸುಮಂತ್ ಅಧ್ಯಕ್ಷರ ಪರಿಚಯಿಸಿದರು. ಸಾತ್ವಿಕ್ ಸ್ವಾಗತಿಸಿದರು.

## ನಗರಕ್ಕೆ ಸಫಾಯಿ ಕರ್ಮಚಾರಿ ಆಯೋಗದ ಶಿವಣ್ಣ

ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಶಿವಣ್ಣ ಅವರು ಇಂದು ಸಂಜೆ ನಗರಕ್ಕಾಗಮಿಸಲಿದ್ದಾರೆ. ನಾಳೆ ಶನಿವಾರ ಮಧ್ಯಾಹ್ನ 12 ಕ್ಕೆ ಸಿ.ಜಿ. ಆಸ್ಪತ್ರೆಗೆ ಭೇಟಿ ನೀಡುವರು. ಮಧ್ಯಾಹ್ನ ಪೌರ ಕಾರ್ಮಿಕರು, ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಹಾಗೂ ಸಿ.ಜಿ. ಆಸ್ಪತ್ರೆಯ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆ ಕುರಿತು ಡಿಸಿ ಕಚೇರಿ ಸಭಾಂಗಣದಲ್ಲಿ ನಡೆಯುವ ಸಭೆಯಲ್ಲಿ ಪಾಲ್ಗೊಳ್ಳುವರು.



## ಕೆ.ಬಿ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ದೀಪೋತ್ಸವ

ದಾವಣಗೆರೆ, ಡಿ.16- ನಗರದ ಕೆ.ಬಿ.ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದಲ್ಲಿ ಕಡೇ ಕಾರ್ತಿಕ ದೀಪೋತ್ಸವವು ಗುರುವಾರ ಸಂಜೆ ವಿಜೃಂಭಣೆಯಿಂದ ಜರುಗಿತು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 5 ರವರೆಗೆ ವಿದ್ಯುತ್ ಇರುವುದಿಲ್ಲ.


ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆ

ದಾವಣಗೆರೆ ಜಿ॥, ತಾ॥ ಬಿ.ಕಲಪನಹಳ್ಳಿ ಗ್ರಾಮದ ವಾಸಿ
ಶ್ರೀಮತಿ ಸಿದ್ದಮ್ಮ ಶ್ರೀ ಮುದುಕಪ್ಪ ಕೆ.ಎಂ. ಪತ್ರಿಬಸಪ್ಪ ಮತ್ತು ಮಕ್ಕಳು
ಹಾಗೂ ದಾವಣಗೆರೆ ಜಿ॥, ಹರಿಹರ ವಾಸಿ
ಶ್ರೀಮತಿ ಪಾರ್ವತಿ ಶ್ರೀ ನೀಲಕಂಠಪ್ಪ ಎನ್. ಕಟ್ಟಿ, (ಮಾಜಿ ಸೈನಿಕರು) ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.



ಚಿ॥ಕುಂ॥ಸೌ॥ ನಾಗಮಣಿ ಕೆ.ಎಂ. ಬಿ.ಇ., ಎಂ.ಟೆಕ್. (ಇ&ಸಿ)
ಶ್ರೀಮತಿ ಸುಧಾ ಶ್ರೀ ಕೆ.ಎಂ. ರೇವಣಸಿದ್ದಪ್ಪ ಇವರ ದ್ವಿತೀಯ ಪುತ್ರಿ
ಹಾಗೂ
ಚಿ॥ರಾ॥ ರವಿಕುಮಾರ್ ಕಟ್ಟಿ, ಬಿ.ಇ., ಎಂ.ಟೆಕ್. (ಮೆಕ್ಯಾನಿಕಲ್)
(ಶ್ರೀಮತಿ ಪಾರ್ವತಿ ಶ್ರೀ ನೀಲಕಂಠಪ್ಪ ಎನ್ ಕಟ್ಟಿ ಇವರ ತೃತೀಯ ಪುತ್ರ)

ಇವರ ವಿವಾಹ ಮಹೋತ್ಸವವನ್ನು ದಿನಾಂಕ 19.12.2021ನೇ ಭಾನುವಾರ ಬೆಳಿಗ್ಗೆ 10.12 ರಿಂದ 10.30 ರವರೆಗೆ ಸಲ್ಲುವ ಶುಭ ಮುಹೂರ್ತದಲ್ಲಿ ಬಿ.ಕಲಪನಹಳ್ಳಿಯ ಶ್ರೀ ಶರಣ ಬಸವೇಶ್ವರ ಕಲ್ಯಾಣ ಮಂಟಪ ಇಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ವಿನಂತಿ.

ಆರತಕ್ಷತೆ :
ದಿನಾಂಕ 18.12.2021
ಶನಿವಾರ
ಸಂಜೆ 7.30 ರಿಂದ

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಸುಧಾ ಶ್ರೀ ಕೆ.ಎಂ. ರೇವಣಸಿದ್ದಪ್ಪ
ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ಟಿಎಪಿಸಿಎಂಎಸ್, ದಾವಣಗೆರೆ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಪಿಎಲ್‌ಡಿ ಬ್ಯಾಂಕ್, ದಾವಣಗೆರೆ. ದಾವಣಗೆರೆ ಉತ್ತರ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರು, ಸದಸ್ಯರು, ಗ್ರಾ.ಪಂ. ಎಲೆಬೇತೂರು. ಬಿ.ಕಲಪನಹಳ್ಳಿ.
ಮೊ: 99641 25682, 96323 06692


# ಜಿಲ್ಲೆಯಲ್ಲಿ ಇಂದಿನಿಂದ ಕಾಲುಬಾಯಿ ರೋಗದ ವಿರುದ್ಧ ಲಸಿಕಾ ಅಭಿಯಾನ

ದಾವಣಗೆರೆ, ಡಿ.16- ಜಿಲ್ಲೆಯಾದ್ಯಂತ ಜಾನುವಾರುಗಳಿಗೆ ಕಾಲುಬಾಯಿ ರೋಗ ವಿರುದ್ಧದಲಸಿಕಾ ಅಭಿಯಾನ ಇಂದಿನಿಂದ ಬರುವ ಜನವರಿ 11 ರವರೆಗೆ ನಡೆಯಲಿದ್ದು, ಎಲ್ಲಾ ಪಶುಪಾಲಕರಿಗೆ ಇದರ ಪ್ರಯೋಜನ ಸಿಗುವಂತೆ ಪಶುಪಾಲನಾ ಇಲಾಖೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.


ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಇಂದು ನಡೆದ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯ ಕ್ರಮದಡಿಯಲ್ಲಿ ಕಾಲುಬಾಯಿ ರೋಗ ಲಸಿಕಾ ಅಭಿಯಾನದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾನುವಾರುಗಳಲ್ಲಿ ಕಾಣಿಸಿಕೊಳ್ಳುವ ಕಾಲುಬಾಯಿ ರೋಗ, ರೈತರಿಗೆ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಈ ರೋಗ ನಿಯಂತ್ರಿಸಿ, ನಿರ್ಮೂಲನೆ ಮಾಡಲು ಪ್ರತಿ 6 ತಿಂಗಳಿಗೊಮ್ಮೆ ರೋಗದ ವಿರುದ್ಧ ಲಸಿಕೆ ಹಾಕಿಸಬೇಕು. ಸರ್ಕಾರ ಈ ಲಸಿಕೆಗಳನ್ನು ಉಚಿತವಾಗಿ ನೀಡುತ್ತಿದೆ ಎಂದು ಅವರು ತಿಳಿಸಿದರು.

ಪಶು ಸಂಗೋಪನಾ ಇಲಾಖೆಯ ಉಪನಿರ್ದೇಶಕ ಡಾ. ಚಂದ್ರಶೇಖರ ಸುಂಕದ್ ಮಾತನಾಡಿ, ಜಿಲ್ಲೆಯಲ್ಲಿ 3,29,697 ಜಾನುವಾರುಗಳಿದ್ದು 3,29,800 ಡೋಸ್ ಲಸಿಕೆ ಜಿಲ್ಲೆಗೆ ಬಂದಿದೆ. ಎಲ್ಲಾ ಜಾನುವಾರುಗಳಿಗೂ ಲಸಿಕೆ ನೀಡಲಾಗುವುದು ಎಂದು ವಿವರಿಸಿದರು.

ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಡಾ.ವೀರೇಶ್, ಕೃಷಿ ವಿಜ್ಞಾನ ಕೇಂದ್ರದ ಜಯದೇವಪ್ಪ, ದೇವರಾಜು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಚಾಮುಂಡೇಶ್ವರಿ ದೇವಿಯ ಕಾರ್ತಿಕ ಮಹೋತ್ಸವ



ಪಿ.ಬಿ. ರಸ್ತೆ ನೀಲಮ್ಮನ ತೋಟದ ಶ್ರೀ ಚಾಮುಂಡೇಶ್ವರಿ ದೇವಿಯ ಕಾರ್ತಿಕ ಮಹೋತ್ಸವವು ಇಂದು ಸಂಜೆ 7 ಗಂಟೆಗೆ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.


ರಜಾ ಸೂಚನೆ
ಕಾರ್ಯಕ್ರಮದ ನಿಮಿತ್ತ ದಿನಾಂಕ : 17.12.2021ರ ಶುಕ್ರವಾರ
ನಮ್ಮ ಅಂಗಡಿಗೆ
(ಮಂಡಿಪೇಟೆ ಶಾಖೆ ಮಾತ್ರ)
ರಜೆ ಘೋಷಿಸಲಾಗಿದೆ.
ಗ್ರಾಹಕರು ಸಹಕರಿಸಲು ಕೋರಿದೆ.
ಶ್ರೀ ಗುರು ಮಹಾರಾಜ ಜ್ಯೂಯಲರಿ ಮಾರ್ಟ್
ಬೆಳ್ಳಿ-ಬಂಗಾರದ ಅಂಗಡಿ, ಮಂಡಿಪೇಟೆ, ದಾವಣಗೆರೆ.


## ಜಿಲ್ಲೆಗೆ ಏಕಲವ್ಯ ವಸತಿಯುತ ಶಾಲೆ ಮಂಜೂರಿಗೆ ಸಂಸದರ ಪ್ರಯತ್ನ



ದಾವಣಗೆರೆ, ಡಿ.16- ಜಗಳೂರು ತಾಲ್ಲೂಕಿನಲ್ಲಿ ಏಕಲವ್ಯ ಮಾದರಿ ವಸತಿ ಶಾಲೆಯನ್ನು ಮಂಜೂರು ಮಾಡಿಕೊಡುವಂತೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾಜಿ ಅವರನ್ನು ದೆಹಲಿಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಇಂದು ಭೇಟಿಯಾಗಿ ಮನವಿ ಮಾಡಿದ್ದಾರೆ.

ಸಂಸದರ ಕ್ರಮವನ್ನು ಸ್ವಾಗತಿಸಿರುವ ಜಿಲ್ಲೆಯ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್, ಜಿಲ್ಲೆಗೆ ಏಕಲವ್ಯ ವಸತಿಯುತ ಶಾಲೆ ತುಂಬಾ ಅವಶ್ಯಕತೆಯಿದ್ದು, ಶಿಕ್ಷಣದಿಂದ ವಂಚಿತರಾಗಿರುವ ಹಿಂದುಳಿದ ಸಮುದಾಯಗಳಿಗೆ ಅನುಕೂಲವಾಗಲಿದೆ ಎಂದರು.

ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಅಟಲ್ ಬಿಹಾರಿ ವಾಜಪೇಯಿ ವಸತಿಯುತ ಮತ್ತೊಂದು ಶಾಲೆಯನ್ನು ಆದಷ್ಟು ಬೇಗ ಪ್ರಾರಂಭಿಸುವಂತೆ ಆನಂದರಾಜ್ ಅವರು ಸಂಸದರನ್ನು ಒತ್ತಾಯಿಸಿದ್ದಾರೆ.


॥ ಶ್ರೀ ಗುರು ವೀರಭದ್ರೇಶ್ವರ ಪ್ರಸನ್ನ ॥
ಪ್ರಾರಂಭೋತ್ಸವ
ಶ್ರೀ ಗುರುರೇಣುಕ ಏಜೆನ್ಸಿ
#1674/18, DCS ಆರ್ಕೇಡ್, ಮೇಲಿನ ನೆಲ ಮಹಡಿ, ಶ್ರೀನಿವಾಸ್ ನಗರ, ಹದಡಿ ರೋಡ್, ದಾವಣಗೆರೆ. ಫೋನ್. : 99021 44552




ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳ ಶೋರೂಂ
ಉದ್ಘಾಟನಾ ಸಮಾರಂಭ
ಆತ್ಮೀಯರೇ, ಮೇಲ್ಕಂಡ ನಮ್ಮ ನೂತನ ಎಲೆಕ್ಟ್ರಿಕ್ ದ್ವಿ-ಚಕ್ರ ವಾಹನಗಳ ಶೋರೂಂ ಪ್ರಾರಂಭೋತ್ಸವವನ್ನು ದಿನಾಂಕ : 18.12.2021ನೇ ಶನಿವಾರ ಬೆಳಗ್ಗೆ : 11.00 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ತಾವುಗಳು ಆಗಮಿಸಬೇಕಾಗಿ ಈ ಮೂಲಕ ಕೋರುತ್ತೇನೆ.



ಬಿ.ಎಂ. ಜಗನ್ನಾಥ್ ಮಲೇಬೆನ್ನೂರು.
ಸರ್ವರಿಗೂ ಸುಸ್ವಾಗತ



ಉಚಿತ ತಪಾಸಣೆ ಮತ್ತು ಸರ್ವೀಸ್‌ನಲ್ಲಿ ರಿಯಾಯಿತಿ
Hyundai Free Car Clinic



Avail our Smart offers between 11th to 20th December, 2021
- 10 % Discount on mechanical parts
- Up to 20% Discount on mechanical labour*
- 20% Discount on sanitization & 1 year RSA
- Free engine oil & oil filter in next service for 1000 lucky customers*
- Incredible benifits on purchase of select models*

* T&C apply
HYUNDAI

ಕೆಜೆ ಹುಂಡೈ
371/271, ಪಿ.ಬಿ.ರಸ್ತೆ, ಅವರಗೆರೆ, ದಾವಣಗೆರೆ.
Ph: 70220 42241, 78999 33674, 70220 01205.
http://kj.hyundaimotor.in | info@kjhyundai.in

ಶಾಖೆ: ಎಸ್.ಜೆ.ಎಂ.ಐ.ಟಿ. ಕಾಲೇಜು ಎದುರು, ಎನ್.ಹೆಚ್-4, ಪಿ.ಬಿ.ರಸ್ತೆ, ಚಿತ್ರದುರ್ಗ. Ph: 70220 01207
ಶಾಖೆ: ಎನ್.ಹೆಚ್-13, ಹೊಳಲ್ಕೆರೆ ರಸ್ತೆ, ಚನ್ನಗಿರಿ. Ph: 08189-298009, 70224 25985


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte